ಸಂಪುಟ: 01 ಸಂಚಿಕೆ: 95 ಪುಟ: 04 ಬೆಲೆ: 02 ಸೋಮವಾರ ಸೆಪ್ಟೆಂಬರ್ 21 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 95 Pages:04 Price:02 MONDAY SEPTEMBER 21 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಅವರವರ ಸಾಮಾರ್ಥ್ಯಕ್ಕನ್ನುಗುಣವಾಗಿ ಇತರೆ ವ್ಯಕ್ತಿಗಳನ್ನು ಅಳೆಯಬಹುದೇ ವಿನಾ ನಮ್ಮ ವ್ಯಕ್ತಿತ್ವವನ್ನು ನಮಗಿಂತ ಸುಂದರವಾಗಿ ಯಾರು ತಾನೆ ಅಳೆದು ಅರ್ಥೈಸಲು ಸಾಧ್ಯವಿಲ್ಲ.

ವಾಣಿ ಭಂಡಾರಿ.

## ಹಂಜಗಿಯಲ್ಲಿ ಗಜಾನನ ಉತ್ಸವದ ಅಂಗವಾಗಿ ಶ್ರೀ ಮಾಯಮ್ಮ ಹಬ್ಬ

ಅ.ಶ. ಸುದ್ದಿ ಇಂಡಿ

ಇಂಡಿ: ಶ್ರೀ ವೀರಮುತೇಶ್ವರ ಗಜಾನನ ಯುವಕ ಮಂಡಳಿ ವತಿಯಿಂದ ಹಂಜಗಿಯಲ್ಲಿ ಚಿಂಚಲಿಯ ಆದಿಶಕ್ತಿ ಶ್ರೀ ಮಾಯಮ್ಮ ದೇವಿಯ ಹಬ್ಬದ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಬಿ.ಡಿ. ಪಾಟೀಲರು ಸಭೆಯನ್ನು ಉದ್ದೇಶಿಸಿ ಮಾತನಾಡಿ,



ಹಬ್ಬ–ಹರಿದಿನಗಳ ಸಂದರ್ಭದಲ್ಲಿ ಇಂತಹ ಮಹಿಮಾಂತ ದೇವತೆಗಳ ಚರಿತ್ರೆ ಹಾಗೂ ಪಾರಾಯಣ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಕಲರ ಮಾನವ ಕಲ್ಯಾಣಕ್ಕಾಗಿ ಪ್ರಾರ್ಥಿಸುತ್ತಿರುವುದು ಸ್ವಾಗತಾರ್ಹ.

ಈ ಬರಗಾಲದ ಸಂದರ್ಭದಲ್ಲಿ ಮಾಯಮ್ಮ ದೇವಿಯ ಕೃಪೆಯಿಂದ ರೈತರ ಮೊಗದಲ್ಲಿ ನಗು ಮೂಡಲಿ ಹಾಗೂ ಉತ್ತಮ ಮಳೆ–ಬೆಳೆ ಆಗಲಿ" ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಶ್ರೀಶೈಲ ಪಾಯಕರ, ಮುತ್ತು ಹಿರೇಕುರಬರ, ಅಪ್ಪಾಸಾಹೇಬ ಪಾಟೀಲ, ಸೋಮನಿಂಗ ಹಿರೇಕುರಬರ, ಅಮಸಿದ್ದ ಪಾಟೀಲ, ಬಾಬು ಮೇತ್ರಿ, ಶಂಕರಪ್ಪ ಹೂಗಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕೆ.ಎನ್.ರಾಜಣ್ಣ ವಿರುದ್ಧ ಸಿಎಂ ಬೆಂಬಲಿಗರ ಆಕ್ರೋಶ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರನ್ನು ಕೆರಳಿಸಿದ್ದು ಅಸಮಾಧಾನದ ಜ್ವಾಲಾಮುಖಿ ಒಳಗೊಳಗೆ ಕುದಿಯಲಾರಂಭಿಸಿದೆ. ರಾಜಣ್ಣ ಅವರ ಅನಪೇಕ್ಷಿತ ಹೇಳಿಕೆಗಳು ಅನಗತ್ಯವಾದ ವಿವಾದ ಹುಟ್ಟುಹಾಕುತ್ತಿದ್ದು, ಅದರಲ್ಲೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲದೇ ಇದ್ದರೆ ಕಾಂಗ್ರೆಸ್ ದುರ್ಬಲವಾಗುತ್ತದೆ ಎಂಬ ಹೇಳಿಕೆ ಕಿಚ್ಚು ಹಚ್ಚಿದೆ.**

ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಎರಡು ಕಣ್ಣುಗಳಿದ್ದಂತೆ. ಅವುಗಳಲ್ಲಿ ಯಾವುದಾದರೂ ಒಂದು ದುರ್ಬಲವಾದರೂ ಪಕ್ಷಕ್ಕೆ ಹಾನಿಯಾಗುತ್ತದೆ ಎಂಬುದು ಎಲ್ಲರ ಅಭಿಪ್ರಾಯ. ಆದ–'ರೆ ರಾಜಣ್ಣ ಉದ್ದೇಶ ಪೂರ್ವಕವಾಗಿ ಸಿದ್ದರಾಮಯ್ಯ ಅವರನ್ನು ಮುಂಚೂಣಿಗೆ ತಂದು, ಹೇಳಿಕೆ ನೀಡುವ ಮೂಲಕ ಗೊಂದಲ ಮೂಡಿಸುತ್ತಿದ್ದಾರೆ ಎಂಬ ಆರೋಪಗಳಿವೆ. ಇಂದು ಸುದ್ದಿಗಾರರ ಜೊತೆ ಮಾತನಾಡಿರುವ ಕುಣಿಗಲ್ ಕ್ಷೇತ್ರ ಶಾಸಕ ಎಚ್.ಡಿ.ರಂಗನಾಥ್ ಅವರು, ರಾಜಣ್ಣ ಯಾವತ್ತೂ ಗಂಭೀರ ಹೇಳಿಕೆ ನೀಡಿಲ್ಲ ಎಂದು ತಳ್ಳಿ ಹಾಕಿದ್ದಾರೆ.



ರಾಜಣ್ಣ ಅವರ ಬಗ್ಗೆ ನನಗೆ ಗೌರವ ಇತ್ತು. ಕಾಂಗ್ರೆಸ್‌ನ ಶಾಸಕರಾಗಿ ಈ ರೀತಿ ಮಾತನಾಡುವುದು ಸರಿಯಲ್ಲ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿರುವುದು, ಒಕ್ಕಲಿಗ ಸಮುದಾಯಕ್ಕೆ ಹರ್ಷ ತಂದಿದೆ. ಆದ–'ರೆ ಡಿ.ಕೆ.ಶಿವಕುಮಾರ್ ಒಂದು ಸಮುದಾಯದ ಮುಖಂಡರಾಗಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಸಿದ್ಧಾಂತ ಹಾಗೂ ಸಮಾನತೆಯ ಆಶಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ರಾಜಣ್ಣ ಈ ರೀತಿ ಮಾತನಾಡುವುದು ಅನಗತ್ಯ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ಜಂಟಿಯಾಗಿ ಕಾಂಗ್ರೆಸ್ ಸಂಘಟನೆಗೆ ಶ್ರಮಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಇಬ್ಬರನ್ನೂ ಬೇರ್ಪಡಿಸಿ ಮಾತನಾಡುತ್ತಿರುವುದು ಪಕ್ಷದ ಹಿತಕ್ಕೆ ಧಕ್ಕೆ ತರುತ್ತದೆ. ತಳ ಮಟ್ಟದಲ್ಲಿ ಜನ ಕಾಂಗ್ರೆಸ್ ಪರವಾದ ಒಲವು ಹೊಂದಿದ್ದಾರೆ. ಹೀಗಿರುವಾಗ ಕಾಂಗ್ರೆಸ್ ನಾಯಕರೇ ಅಡ್ಡ ಮಾತನಾಡುತ್ತಿರುವುದು ಎಷ್ಟು ಸರಿ ಎಂದು? ಪ್ರಶ್ನಿಸಿದ್ದಾರೆ.

> “ ರಾಜಣ್ಣ ಅವರ ಬಗ್ಗೆ ನನಗೆ ಗೌರವ ಇತ್ತು. ಕಾಂಗ್ರೆಸ್‌ನ ಶಾಸಕರಾಗಿ ಈ ರೀತಿ ಮಾತನಾಡುವುದು ಸರಿಯಲ್ಲ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿರುವುದು, ಒಕ್ಕಲಿಗ ಸಮುದಾಯಕ್ಕೆ ಹರ್ಷ ತಂದಿದೆ. ಆದರೆ ಡಿ.ಕೆ.ಶಿವಕುಮಾರ್ ಒಂದು ಸಮುದಾಯದ ಮುಖಂಡರಾಗಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಸಿದ್ಧಾಂತ ಹಾಗೂ ಸಮಾನತೆಯ ಆಶಯದೊಂದಿಗೆ ಕೆಲಸ ಮಾಡುತ್ತಿದ್ದಾರೆ. ರಾಜಣ್ಣ ಈ ರೀತಿ ಮಾತನಾಡುವುದು ಅನಗತ್ಯ ಎಂದು ಹೇಳಿದ್ದಾರೆ.

ಮೊನ್ನೆ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ರಾಜಣ್ಣ ಅವರ ಹೇಳಿಕೆಗೆ ಕಿಡಿಕಾರಿದರು. ಮುಖ್ಯಮಂತ್ರಿಯಾದ ಬಳಿಕ ಡಿ.ಕೆ.ಶಿವಕುಮಾರ್ ಸೌಹಾರ್ದಯುತ ವಾತಾವರಣ ಕಲ್ಪಿಸಲು ಪ್ರಯತ್ನಿಸುತ್ತಿದ್ದಾರೆ. ರಾಜಣ್ಣ ಸೇರಿದಂತೆ ಕೆಲವು ನಾಯಕರುಗಳ ಅನಪೇಕ್ಷಿತ ಹೇಳಿಕೆಗಳಿಗೆ ಪ್ರತಿಕ್ರಿಯಿಸುತ್ತಿಲ್ಲ. ಆದರೆ ಡಿ.ಕೆ.ಶಿವಕುಮಾರ್ ಅವರ ಆಪ್ತರು ರಾಜಣ್ಣ ಅವರಂತಹ ನಾಯಕರ ಹೇಳಿಕೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈ ರೀತಿಯ ಗೊಂದಲಕಾರಿ ಹೇಳಿಕೆಗಳನ್ನು ನಿಯಂತ್ರಿಸಲು ಶಾಸಕಾಂಗ ಸಭೆ ಕರೆದು ಚರ್ಚೆ ನಡೆಸಬೇಕು ಎಂಬ ಒತ್ತಾಯಗಳು ಕೇಳಿ ಬಂದಿವೆ.

# ಕಳೆದ 9 ತಿಂಗಳಲ್ಲಿ ರಾಜ್ಯದ ಕಾರಾಗೃಹಗಳಲ್ಲಿ 410 ಮೊಬೈಲ್‌ಗಳು ಪತ್ತೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕಳೆದ ಒಂಬತ್ತು ತಿಂಗಳ ಅವಧಿಯಲ್ಲಿ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ 410 ಮೊಬೈಲ್‌ಗಳು ಪತ್ತೆಯಾಗಿವೆ. ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹವೊಂದರಲ್ಲೇ 334 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 2025ರಲ್ಲಿ 148 ಮೊಬೈಲ್‌ಗಳು ಹಾಗೂ 68 ಸಿಮ್‌ಕಾರ್ಡ್‌ಗಳು, 2024ರಲ್ಲಿ 104 ಮೊಬೈಲ್‌ಗಳು ಹಾಗೂ 10 ಸಿಮ್‌ಕಾರ್ಡ್‌ಗಳು ಪತ್ತೆಯಾಗಿದ್ದವು.**

ಕಾರಾಗೃಹಗಳ ಪೊಲೀಸ್ ಮಹಾನಿರ್ದೇಶಕರಾಗಿ ಅಲೋಕ್‌ಕುಮಾರ್



ಅವರು ಅಧಿಕಾರ ವಹಿಸಿಕೊಂಡ ಬಳಿಕ ರಾಜ್ಯದ ಎಲ್ಲ ಕಾರಾಗೃಹಗಳಿಗೆ ಭೇಟಿ ನೀಡಿ, ಅಧಿಕಾ–ರಿಗಳೊಂದಿಗೆ ಸಭೆ ನಡೆಸಿದ್ದಾರೆ. ಯಾವುದೇ ಕಾರಣಕ್ಕೂ ಜೈಲಿನೊಳಗೆ ಮೊಬೈಲ್ ಬಳಕೆ, ಮಾದಕ ವಸ್ತುಗಳ ಸೇವನೆ ಸೇರಿದಂತೆ ಅಕ್ರಮ ಚಟುವಟಿಕೆಗಳು ನಡೆಯಬಾರದು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಸ್ಥಳೀಯ ಪೊಲೀಸರು ಕಾರಾಗೃಹಗಳ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಮೊಬೈಲ್‌ಗಳು ಪತ್ತೆಯಾಗಿವೆ.

ಇತ್ತೀಚೆಗೆ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ. ಮಂಗಳೂರು ಕಾರಾಗೃಹದಲ್ಲಿ 10 ಹಾಗೂ ಕಲಬುರಗಿ ಕಾರಾಗೃಹದಲ್ಲಿ ಒಂದು ಮೊಬೈಲ್‌ನ್ನು ಪೊಲೀಸರು ಜಪ್ತಿ ಮಾಡಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಮೊಬೈಲ್‌ಗಳು ಪತ್ತೆಯಾದ ಹಿನ್ನೆಲೆಯಲ್ಲಿ ಅಧಿಕಾರಿ ಹಾಗೂ ವಾರ್ಡನ್‌ಗಳನ್ನು ಅಲೋಕ್‌ಕುಮಾರ್ ಅವರು ಅಮಾನತುಗೊಳಿಸಿದ್ದಾರೆ.

ಅಲೋಕ್‌ಕುಮಾರ್ ಅವರು ಕಠಿಣ ಕ್ರಮ ಕೈಗೊಂಡಿದ್ದರೂ ಕಾರಾಗೃಹಗಳೊಳಗೆ ಮೊಬೈಲ್‌ಗಳ ಪ್ರವೇಶ ಮುಂದುವರಿದಿದೆ. ಮೊಬೈಲ್ ಬಳಕೆಯನ್ನು ತಡೆಯಲು ಕಾರಾಗೃಹಗಳಲ್ಲಿ ಜಾಮರ್‌ಗಳನ್ನು ಅಳವಡಿಸಲಾಗಿದ್ದರೂ ಅವುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಆರೋಪಗಳಿವೆ. ಹೀಗಾಗಿ ಕಾರಾಗೃಹಗಳೊಳಗೆ ಮೊಬೈಲ್ ಬಳಕೆ ನಿರಂತರವಾಗಿ ನಡೆಯುತ್ತಿದೆ.






# ಪ್ರತಾಪ ಸಿಂಹ ತನ್ನ ಹೇಳಿಕೆಗೆ ದಲಿತರನ್ನು ಕ್ಷಮೆಯಾಚಿಸಬೇಕು : ದಲಿತ ಮುಖಂಡ ಹನುಮಮೇಶ ಕಡೇಮನಿ ಆಗ್ರಹ,,

ಅ.ಶ. ಸುದ್ದಿ ಕುಕನೂರು

**ಕುಕನೂರು : ಮಾಜಿ ಸಂಸದ ಪ್ರತಾಪ ಸಿಂಹ ದಲಿತರ, ದಲಿತ ಸಂಘಟನೆ ಹಾಗೂ ನೀಲಿ ಶಾಲಿನ ಬಗ್ಗೆ ಮಾತನಾಡುವ ಯಾವ ನೈತಿಕತೆ ಹೊಂದಿಲ್ಲಾ, ಈ ಪುಡಾರಿಯು ನಮ್ಮ ಸಮುದಾಯದ ನೀಲಿ ಶಾಲಿನ ಬಗ್ಗೆ ಮಾತನಾಡಿರುವುದು ಖಂಡನೀಯವಾಗಿದ್ದು, ಕೂಡಲೇ ಸಾರ್ವಜನಿಕವಾಗಿ ದಲಿತರನ್ನು ಕ್ಷಮೆಯಾಚಿಸಬೇಕು ಎಂದು ದಲಿತ ಮುಖಂಡರಾದ ಹನುಮೇಶ ಕಡೇಮನಿ ಆಗ್ರಹಿಸಿದರು.**



ಅವರು ಪಟ್ಟಣದ ನೀರಿಕ್ಷಣಾ ಮಂದಿರದಲ್ಲಿ ರವಿವಾರದಂದು ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ನಮಗೆ ನೀಲಿ ಶಾಲನ್ನು ಡಾ. ಬಿ. ಆರ್ ಅಂಬೇಡ್ಕರ ಅವರು ನೀಡಿದ ಕೊಡುಗೆಯಾಗಿದ್ದು, ಯಾವುದೇ ಕೋಮಿನ ಬಗ್ಗೆ ಬಣ್ಣದ ಬಗ್ಗೆ ಮಾತನಾಡವ ನೈತಿಕತೆ ಪ್ರತಾಪ್ ಸಿಂಹನಿಗೆ ಇಲ್ಲಾ, ಈ ರೀತಿ ಹೇಳಿಕೆ ನೀಡುತ್ತಿರುವುದು ಹುಚ್ಚರ ಲಕ್ಷಣವಾಗಿದೆ ಎಂದರು. ಬಾಲ ಗಂಗಾಧರ ತಿಲಕ ಅವರು ಹಿಂದುಗಳನ್ನು ಒಂದು ಮಾಡಿ ಸಂಘಟನೆಯ ಮೂಲಕ ಸ್ವಾತಂತ್ರ ಪಡೆಯುವ ಕಿಚ್ಚು ಹಚ್ಚಿದರು, ಆದರೆ ಇಂತಹ ನಾಲಾಯಕ್ ಪ್ರತಾಪ ಸಿಂಹನಂತವರು ಗಣೇಶನ ಹೆಸರಿನಲ್ಲಿ ಓಟ್ ಬ್ಯಾಂಕಿಗೆ ಇಂತಹ ಹೇಳಿಕೆ ನೀಡುತ್ತಾನೆ, ಮೊದಲು ತನ್ನನ್ನು ತಾನು ಅರಿತು ಮಾತನಾಡಬೇಕು ಇದರ ಬಗ್ಗೆ ಕ್ಷಮೆ ಯಾಚಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ನಂತರ ದಲಿತ ಮುಖಂಡ ರಾಘವೇಂದ್ರ ಕಾತರಕಿ ಮಾತನಾಡಿ ನೀಲಿ ಶಾಲನ್ನು ಡಾ. ಬಾಬಾ ಸಾಹೇಬ ಅಂಬೇಡ್ಕರ ಅವರು ದಲಿತರಿಗೆ ನೀಡಿದ ಸಂಕೇತವಾಗಿದೆ ಇದರ ಬಗ್ಗೆ ಹಗುರವಾಗಿ ಮಾತನಾಡುವ ಪ್ರತಾಪ್ ಸಿಂಹ ನಿನಗೆ ಮಾನ, ಮರ್ಯಾದೆ ಏನಾದರೂ ಇದ್ದರೇ ನಾಲಿಗೆ ಹಿಡಿತದಲ್ಲಿಟ್ಟುಕೊಂಡು ಮಾತನಾಡು ಇಲ್ಲದಿದ್ದರೇ ನಿನಗೆ ಪೊರಕೆ ಸೇವೆ ಮಾಡಬೇಕಾಗುತ್ತದೆ ಎಂದು ರಾಘವೇಂದ್ರ ಎಚ್ಚರಿಕೆ ನೀಡಿದರು.

ನೀನೊಬ್ಬ ಅಯೋಗ್ಯನೆಂದು ನಿನಗೆ ಬಿಜೆಪಿ ಟೀಕೆಟ್ ನೀಡಲು ನಿರಾಕರಿಸಿತು ಇದು ಎಚ್ಚರವಿರಲಿ.

ನಿನಗೆ ಬಿಜೆಪಿಯಲ್ಲಿ ಯಾವುದೇ ಹುದ್ದೆ ಇಲ್ಲದೇ ಮತಿ ಭ್ರಮಣೆಗೊಂಡು ಹುಚ್ಚನಂತೆ ವರ್ತಿಸುತ್ತಿದ್ದಿಯಾ, ಜಾತಿಗಳ ನಡುವೆ ಕೋಮು ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿದ್ದೀಯಾ, ದಕ್ಷ ಪೋಲಿಸ್ ಅಧಿಕಾರಿ ಧನಂಜಯ ಅವರ ಮೇಲೆ ದಬ್ಬಾಳಿಕೆ ನಡೆಸಿದ್ದಿಯಾ, ನಮ್ಮ ದೇಶ ನಡೆಯುತ್ತಿರುವುದು ಬಿಜೆಪಿಯಿಂದಾಗಲಿ, ನಿಮ್ಮ ಆರ್.ಎಸ್.ಎಸ್, ಮತ್ತು ಭಜರಂಗದಳ ಹಾಗೂ ನಿಮ್ಮಂತ ಪುಂಡರಿಂದಾಗಲಿ ಈ ದೇಶ ನಡೆಯುತ್ತಿಲ್ಲಾ, ನಮ್ಮ ದೇಶ ಡಾ. ಬಾಬಾ ಸಾಹೇಬ ಅವರ ಸಂವಿಧಾನದಿಂದ ನಡೆಯುತ್ತಿದೆ ಎಂದು ಎಚ್ಚರವಿರಲಿ ಎಂದರು.

ಇದೇ ರೀತಿ ನಿನ್ನ ಪುಂಡಾಟಿಕೆ ನಡೆಸಿದರೇ ಮುಂದಿನ ದಿನಗಳಲ್ಲಿ ದಲಿತಪರ ಸಂಘಟನೆಗಳಿಂದ ನಿನಗೆ ತಕ್ಕ ಪಾಠ ಕಲಿಸಲಿದ್ದೇವೆ ಎಂದು ಎಚ್ಚರಿಸಿದರು. ಕೂಡಲೇ ನೀನು ದಲಿತರನ್ನು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ನಂತರ ಮುಖಂಡರಾದ ಚತ್ರಪ್ಪ ಚಲವಾದಿ ಮಾತನಾಡಿ ಮಾಜಿ ಸಂಸದ ಪ್ರತಾಪ್ ಸಿಂಹ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಇದು ಒಂದು ಅಸ್ತ್ರ ಮಾಡಿಕೊಂಡಿದ್ದಾನೆ. ಡಿಎಸ್ಎಸ್ ಸಂಘಟನೆಗಳ ಬಗ್ಗೆ ತಿಳಿದು ಮಾತನಾಡಬೇಕು, ಗ್ರಾಮೀಣ, ತಾಲ್ಲೂಕ, ಜಿಲ್ಲೆ ಹಾಗೂ ರಾಜ್ಯಾದ್ಯಂತ ಸಂಘಟನೆಗಳು ಸಕ್ರಿಯವಾಗಿವೆ. ಪ್ರತಾಪ್ ಸಿಂಹ ತನ್ನ ಹೇಳಿಕೆಯನ್ನು ಹಿಂದೆ ಪಡೆದು ದಲಿತರಲ್ಲಿ ಕ್ಷಮೆ ಯಾಚಿಸಬೇಕು ಇಲ್ಲದಿದ್ದರೇ ಗ್ರಾಮ ಘಟಕದಿಂದ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಚತ್ರಪ್ಪ ಚಲವಾದಿ, ಭೀಮಣ್ಣ ಬೂದಗುಂಪಿ, ಶಂಕರ್ ಜಕ್ಕಲಿ, ರಾಘವೇಂದ್ರ ಕಾತರಕಿ, ಮರಿಸ್ವಾಮಿ ಮಂಗಳೂರು ಸೇರಿದಂತೆ ಇನ್ನಿತರರು ಇದ್ದರು.

## ಬೆಂಗಳೂರಲ್ಲಿ ವ್ಹೀಲಿಂಗ್ ಹುಚ್ಚಾಟಕ್ಕೆ ಅಮಾಯಕ ಡೆಲಿವರಿ ಬಾಯ್ ಬಲಿ

ಅ.ಶ. ಸುದ್ದಿ ಬೆಂಗಳೂಉರ

**ಬೆಂಗಳೂರು: ಪ್ರವಾಸಕ್ಕೆ ಹೋಗುತ್ತಿದ್ದ ಟಿಟಿ ವಾಹನಕ್ಕೆ ಅಡ್ಡ ಬಂದ ವ್ಹೀಲಿಂಗ್ ಮಾಡುತ್ತಿದ್ದವರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ನಿಯಂತ್ರಣ ತಪ್ಪಿ ರಸ್ತೆ ವಿಭಜಕ ದಾಟಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಒಬ್ಬರು ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ಬೆಳಗಿನ ಜಾವ ಸಂಭವಿಸಿದೆ.**



ಲಗ್ಗೆರೆ ನಿವಾಸಿ ಮನೋಜ್(25) ಮೃತಪಟ್ಟ ದುರ್ದೈವಿ. ಈತ ವೃತ್ತಿಯಲ್ಲಿ ಡೆಲಿವರಿ ಬಾಯ್. ಆರು ಮಂದಿ ಸ್ನೇಹಿತರು ಲಗ್ಗೆರೆಯಿಂದ ಮೈಸೂರಿಗೆ ಇಂದು ಬೆಳಗಿನ ಜಾವ ಚಾಲಕ ರವಿ ಎಂಬುವರೊಂದಿಗೆ ಟಿಟಿ ವಾಹನದಲ್ಲಿ ಪ್ರಯಾಣ ಬೆಳೆಸಿದ್ದರು. ಇವರೆಲ್ಲರೂ ಡೆಲಿವರಿ ಬಾಯ್‌ಗಳು. ಬೆಳಗಿನ ಜಾವ 2 ಗಂಟೆ ಸುಮಾರಿನಲ್ಲಿ ಈ ವಾಹನ ರಿಂಗ್‌ರಸ್ತೆಯ ಸುಮನಹಳ್ಳಿ ಸಮೀಪ ಅನ್ನಪೂರ್ಣೇಶ್ವರಿ ನಗರದ ಮಹದೇಶ್ವರ ದೇವಸ್ಥಾನದ ಬಳಿ ಚಾಲಕನ ನಿಯಂತ್ರಣ ತಪ್ಪಿ ವಾಹನ ಡಿವೈಡರ್ ದಾಟಿ ರಸ್ತೆಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತಿದ್ದ ಮನೋಜ್ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ. ವಾಹನದ ಚಾಲಕ ರವಿ ಎಂಬುವವರಿಗೆ ಗಂಭೀರ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಣ್ಣಪುಟ್ಟ ಗಾಯಗೊಂಡಿರುವ ಇನ್ನುಳಿದ ನಾಲ್ವರು ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ತೆರಳಿದ್ದಾರೆ. ಒಂದು ಮೂಲದ ಪ್ರಕಾರ, ಅತೀ ವೇಗ ಹಾಗೂ ಅಜಾಗರೂಕತೆಯಿಂದ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಆದರೆ ಮತ್ತೊಂದು ಮೂಲದ ಪ್ರಕಾರ, ಈ ರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಿದ್ದವರು ಏಕಾಏಕಿ ಟಿಟಿ ವಾಹನಕ್ಕೆ ಅಡ್ಡ ಬಂದಿದ್ದರಿಂದ ಅವರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಮುಂದಾದಾಗ ಈ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಜ್ಞಾನಭಾರತಿ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳದ ಸುತ್ತಮುತ್ತಲಿನಲ್ಲಿರುವ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ಭಾಗಿ ಮಳೆಗಾಗಿ ಇಂಡಿಯಲ್ಲಿ ಪ್ರಾರ್ಥನೆ

ಅ.ಶ. ಸುದ್ದಿ ಇಂಡಿ

**ಇಂಡಿ: ರೈತರ ಬದುಕು ಹಸನಾಗಲಿ, ನಾಡಿನಲ್ಲಿ ಉತ್ತಮ ಮಳೆಯಾಗಲಿ ಸಮೃದ್ಧಿ ನೆಲೆಸಲಿ ಎಂದು ಮುಸ್ಲೀಂ ಬಾಂಧವರು ಸಾಮೂಹಿಕವಾಗಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ನಗರದ ಹೊರವಲಯದ ಈದಗಾ ಮೈದಾನದಲ್ಲಿ ಮಳೆಗಾಗಿ ಪ್ರಾರ್ಥಿಸುವ ವಿಶೇಷ ಪ್ರಾರ್ಥನೆ ಸಲಾತ್ ಅಲ್ ಇಸ್ತಿಸ್ಕಾ ನಮಾಜನ್ನು ಮಾಡಿದರು.**



ಅಲ್ಲಿ ಪ್ರಾರ್ಥನೆ ಬೋದಿಸಿದ ಧರ್ಮಗುರುಗಳಾದ ಶಕೀರ ಹುಸೇನ ಖಾಸ್ಮಿ ಕಣ್ಣೀರು ಹಾಕುತ್ತ ಓ ದೇವರೆ ನಾವು ನಿನ್ನ ಮಕ್ಕಳು, ನಮ್ಮಿಂದ ತಪ್ಪಾಗಿದ್ದರೆ ಕ್ಷಮಿಸಿ. ಮಳೆಯೇ ಆಗದಿದ್ದರೆ ಕೃಷಿ ಬರಬೇಕಾದ ಆಹಾರ ಧಾನ್ಯಗಳು ಬರುವದಿಲ್ಲ, ರೈತರ ಪರಿಸ್ಥಿತಿ ಗಂಭೀರ ವಾಗುತ್ತದೆ. ದನ ಕರುಗಳು ಪ್ರಾಣಿ ಪಕ್ಷಿಗಳು ನಿರಪರಾಧಿ ಅವೂ ಕೂಡ ತೊಂದರೆ ಅನುಭವಿಸಬೇಕಾಗುತ್ತದೆ.ನೀನು ಕರುಣಾಮಯಿ, ಸಕಲ ಜೀವಾತ್ಮರ ಮೇಲೆ ಕರುಣೆ ತೋರಬೇಕು.ಮಳೆ ಬಾರದೇ ಇದ್ದರೆ ಜಗತ್ತು ಶೂನ್ಯ. ರಾಜ್ಯ ಜಿಲ್ಲೆ ತಾಲೂಕಿನ ಜನರು ಸುಖವಾಗಿ ಬಾಳಲು ಮಳೇಯೇ ಮೂಲ.

ಮಳೆ ಇಲ್ಲದಿದ್ದರೆ ಕುಡಿಯಲು ಕೂಡ ನೀರು ಸಿಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಕಣ್ಣೀರು ಇಡುತ್ತ ಒಂದು ತಾಸು ನಮಾಜು ಬೋಧಿಸಿದರು. ಧರ್ಮ ಗುರುಗಳಾದ ಝೀಯಾ ಉಲ್ಲ ಹಕ್ ಉಮರಿ, ಮುಫ್ತಿ ಅಬ್ದುಲ ರಹಮಾನ ಅತಬ, ಮೌಲಾನಾ ಸಾದುದ್ದೀನ ಸಾಬ್ ಹಫೀಜ ಬಾಷಾ ಬಾಗವಾನ , ಫೀರೋಜ ಬಾಗವಾನ ನಮಾಜ ಬೋದಿಸುವಲ್ಲಿ ಸಹಕರಿಸಿದರು. ಅಬ್ದುಲ್ ರಶೀದ ಅರಬ, ರಫೀಕ ಇಂಡಿಕರ, ಸದ್ದಾಂ ಹುಸೇನ, ಫಾರುಕ ತುರ್ಕಿ, ಜಾವೇದ ಮೋಮಿನ, ರೈಸ ಅಷ್ಟೇಕರ, ನಜೀರ ಪಠಾಣ, ಮುಬಾರಕ ಕೋಲ್ಹಾರ, ಯುನುಸ ರೇವೂರಕರ, ಮೆಹಬೂಬ ಕಡಿಚೂರ, ಹಸನ ಮುಜಾವರ, ಹುಮಾಯುನ ಮಕಾನದಾರ , ಸತ್ತಾರ ಬಾಗವಾನ , ಮಹಮ್ಮದ ಬೇಪಾರಿ, ರಶೀದಮುಗಾಳಿ ಮತ್ತಿತರಿದ್ದರು.

## ಸುವರ್ಣ ಕರ್ನಾಟಕ ರಕ್ಷಣಾ ಸೈನ್ಯದಿಂದ ನೂತನ ಪದಾಧಿಕಾರಿಗಳ ಆಯ್ಕೆ

### ವಿವಿಧ ಹುದ್ದೆಗಳಿಗೆ ಪದಾಧಿಕಾರಿಗಳ ನೇಮಕ, ಶಿರಹಟ್ಟಿ ತಾಲೂಕು ಅಧ್ಯಕ್ಷರಾಗಿ ಇರ್ಫಾನ್ ನೇಮಕ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸುವರ್ಣ ಕರ್ನಾಟಕ ರಕ್ಷಣಾ ಸೈನ್ಯ (ರಿ.) ಜಿಲ್ಲಾ ಘಟಕದ ವತಿಯಿಂದ ಸಂಘಟನೆಯ ವಿವಿಧ ಘಟಕಗಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿ, ಅವರಿಗೆ ಅಧಿಕೃತ ಆಯ್ಕೆ ಆದೇಶ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಸಂಘಟನೆಯ ಜಿಲ್ಲಾ ಘಟಕವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ನಡೆದ ಕಾರ್ಯಕ್ರಮದಲ್ಲಿ ವಿವಿಧ ಹುದ್ದೆಗಳಿಗೆ ಪದಾಧಿಕಾ**ರಿಗಳನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾ ಮಧ್ಯಮ ವಕ್ತಾರರನ್ನಾಗಿ ಕನಕಪ್ಪ ತಳವಾರ, ನಗರ ಘಟಕದ ಉಪಾಧ್ಯಕ್ಷರನ್ನಾಗಿ ಮಹಾಂತೇಶ ಹಲಗೇರಿ, ನಗರ ಘಟಕದ ಪ್ರಧಾನ ಕಾರ್ಯದರ್ಶಿಯನ್ನಾಗಿ ರಹಿಮಾನ ಮಣ್ಣೂರ ಅವರನ್ನು ಆಯ್ಕೆ ಮಾಡಲಾಯಿತು. ಅದೇ ರೀತಿ ಜಿಲ್ಲಾ ಸಮಿತಿಯ ಸದಸ್ಯರನ್ನಾಗಿ ಗೂಳಿಬಸಪ್ಪ ಬಡಿಗೇರ, ವಿಠ್ಠಲ್ ಹೊರತಟ್ನಾಳ ಹಾಗೂ ಮಹಮ್ಮದ್ ಅಲಿ ಅವರನ್ನು ನೇಮಕ ಮಾಡಲಾಯಿತು. ನೂತನ ಪದಾಧಿಕಾರಿಗಳಿಗೆ ಸಂಘಟನೆಯ ಹಿರಿಯ ಮುಖಂಡರ ಸಮ್ಮುಖದಲ್ಲಿ ಆಯ್ಕೆ ಆದೇಶ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಜವಾಬ್ದಾರಿಗಳನ್ನು ವಹಿಸಲಾಯಿತು.

ಕಾರ್ಯಕ್ರಮದಲ್ಲಿ ಸುವರ್ಣ ಕರ್ನಾಟಕ ರಕ್ಷಣಾ ಸೈನ್ಯದ ಕಾನೂನು ಸಲಹೆಗಾರ ಜಿ.ಎಂ. ಶಿವಪುರ, ರಾಜ್ಯಾಧ್ಯಕ್ಷ ಆರ್. ಟಿಕ್ಯಾ ನಾಯ್ಕ್, ರಾಜ್ಯ ಸಹಕಾರ ಕಾರ್ಯದರ್ಶಿ ಸಂಜಯ್ ದಾಸ್, ಜಿಲ್ಲಾಧ್ಯಕ್ಷ ಹನುಮೇಶ್ ಕೊಪ್ಪಳ, ಜಿಲ್ಲಾ ಉಪಾಧ್ಯಕ್ಷ ಮರ್ದಾನ್ ಸಾಬ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಪಿ. ನದಾಫ್, ತಾಲೂಕು ಅಧ್ಯಕ್ಷ ರಾಮಲಿಂಗ ಶಾಸ್ತ್ರಿ, ಯಮನೂರು-ಅಳವಂಡಿ ಹೋಬಳಿ ಘಟಕದ ಅಧ್ಯಕ್ಷರು ಸೇರಿದಂತೆ ಸಂಘಟನೆಯ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಆರ್. ಟಿಕ್ಯಾ ನಾಯ್ಕ್ ಅವರ ಸಮ್ಮುಖದಲ್ಲಿ ಶಿರಹಟ್ಟಿ ತಾಲೂಕು ಘಟಕದ ಅಧ್ಯಕ್ಷರನ್ನಾಗಿ ಇರ್ಫಾನ್ ಅವರನ್ನು ನೇಮಕ ಮಾಡಲಾಯಿತು. ನೂತನವಾಗಿ ನೇಮಕಗೊಂಡ ಎಲ್ಲ ಪದಾಧಿಕಾರಿಗಳಿಗೆ ಮುಖಂಡರು ಅಭಿನಂದನೆ ಸಲ್ಲಿಸಿ, ಸಂಘಟನೆಯ ಉದ್ದೇಶ ಹಾಗೂ ಆಶಯಗಳನ್ನು ಪರಿಣಾಮಕಾರಿಯಾಗಿ ಜನರ ಬಳಿಗೆ ತಲುಪಿಸುವಂತೆ ಕರೆ ನೀಡಿದರು. ಕನ್ನಡ ನಾಡು, ನುಡಿ, ನೆಲ, ಜಲ ಹಾಗೂ ಕನ್ನಡಿಗರ ಹಿತಾಸಕ್ತಿಗಳ ರಕ್ಷಣೆಗೆ ಸಂಘಟನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಸಂಘಟಿಸುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ನೂತನ ಪದಾಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದು ರಾಜ್ಯಾಧ್ಯಕ್ಷರು ತಿಳಿಸಿದರು.

## ಸಾಫ್ಟ್‌ವೇರ್ ಹೆಸರಿನಲ್ಲಿ ಬೆಂಗಳೂರಿಗರ ಜೇಬಿಗೆ 'ಕೈ' ಹಾಕಿದ ಸರ್ಕಾರ : ಹೆಚ್ಡಿಕೆ ಆರೋಪ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕಾಂಗ್ರೆಸ್ ಸರ್ಕಾರ ಸಾಫ್ಟ್‌ವೇರ್ ಹೆಸರಿನಲ್ಲಿ ಬೆಂಗಳೂರಿನ ನಾಗರಿಕರ ಜೇಬಿಗೆ ಕೈ ಹಾಕುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 'ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕ ಎಟಿಎಂ ಆಗಿದೆ' ಎಂದು ಕಿಡಿಕಾರಿದ್ದಾರೆ. 'ಸುಲಿಗೆಯಲ್ಲಿ ಈ ಸರ್ಕಾರ 50**



ವರ್ಷಗಳ ದಾಖಲೆ ಸರಿಗಟ್ಟಲಿದೆ. ಸೇವೆಗೆ 10,000 ವರೆಗೆ ಶುಲ್ಕ ವಿಧಿಸುವುದು ಪಿಕ್‌ಪಾಕೆಟ್ ಅಲ್ಲದೆ ಮತ್ತೇನು?' ಎಂದು ಅವರು ಪ್ರಶ್ನಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಬಂದ ಮೇಲೆ ಬೆಂಗಳೂರು ಗ್ರೇಟ್ ಆಗುತ್ತದೆ. ನಾಡಪ್ರಭು ಕೆಂಪೇಗೌಡರು ಕಟ್ಟಿದ ಈ ಮಹಾನಗರದ ವ್ಯಾಪ್ತಿ ಹಿಗ್ಗಿಸಿದರೆ ಅಭಿವೃದ್ಧಿಗೆ ಅನುಕೂಲ. 50 ವರ್ಷಗಳಲ್ಲಿ ಯಾರೂ ಮಾಡದ ಕೆಲಸವನ್ನು ನಾವು ಮಾಡುತ್ತಿದ್ದೇವೆ' ಎಂದು ಹೇಳಿದ್ದನ್ನು ಉಲ್ಲೇಖಿಸಿರುವ ಕುಮಾರಸ್ವಾಮಿ, 'ನಿಮ್ಮ ಆಸ್ತಿ, ನಿಮ್ಮ ಹಕ್ಕು. ನಿಮ್ಮ ಮನೆ ಬಾಗಿಲಿಗೇ ದಾಖಲೆಗಳನ್ನು ತಲುಪಿಸುತ್ತೇವೆ. ಸುಳ್ಳು ಹೇಳುವುದಕ್ಕೆ ಸಂಕೋಚವಿಲ್ಲ, ಸುಲಿಗೆಗೆ ನಾಚಿಕೆಯೂ ಇಲ್ಲ' ಎಂದು ಟೀಕಿಸಿದ್ದಾರೆ. 'ಬೆಂಗಳೂರು ವ್ಯಾಪ್ತಿ ಹಿಗ್ಗಿಸುವುದು ಎಂದರೆ ಸುಲಿಗೆಗೆ ವ್ಯಾಪಕ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವುದು. ರಾಜ್ಯ ಕಾಂಗ್ರೆಸ್ ಸರ್ಕಾರ ಅದನ್ನೇ ಮಾಡಿದೆ' ಎಂದು ಅವರು ಆರೋಪಿಸಿದ್ದಾರೆ.

### 'ವಚನಾಮೃತ'

ಬಂಜೆ ಬಂಜೆ ಎಂದು ನಂಜಿರಿಸಿ
ಚುಚ್ಚೊ ಮೂಳರಿಗೆ ನಿತ್ಯ ಮೃಷ್ಟಾನ್ನವೇ
ಬಡಿಸಿ ಕಳಿಸಬೇಕಯ್ಯ ಬಾಡಿಗೆ
ಮನೆಯೊಳ್ ಬಂಧಿ ನಾವೆಲ್ಲ ಎಂಬರಿಯದ ಮಂದಿಯೊಳ್ ನನ್ನಗೇನಿದೆ
ಕಜ್ಜ ಸತ್ಯವಾಣಿ!!.



ವಾಣಿ ಭಂಡಾರಿ.

# ಕ್ರೀಡೆಯಿಂದ ಮಕ್ಕಳಲ್ಲಿ ದೈಹಿಕ ಸಾಮರ್ಥ್ಯ, ಮಾನಸಿಕ ಸ್ಥೈರ್ಯ ವೃದ್ಧಿ:

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ತಾಲೂಕಿನ ಕೇಸಾಪುರ ಗ್ರಾಮದ ಸಿದ್ಧಾರ್ಥ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯ ಅಧಿಕಾರಿಗಳ ಕಾರ್ಯಾಲಯ, ಮುದ್ದೇಬಿಹಾಳ ಹಾಗೂ ಸಿದ್ಧಾರ್ಥ ಪಬ್ಲಿಕ್ ಸ್ಕೂಲ್ ಸಹಯೋಗದಲ್ಲಿ ನಾಲತವಾಡ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟವು ಅದ್ದೂರಿಯಾಗಿ ನಡೆಯಿತು.**





ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಮುದ್ನೂರ ಹಾಗೂ ದೈಹಿಕ ಪರಿವೀಕ್ಷಕ ಎಸ್.ಬಿ. ಕುಂಬಾರ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಬೇಕು. ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಮಕ್ಕಳಲ್ಲಿ ದೈಹಿಕ ಸಾಮರ್ಥ್ಯದ ಜತೆಗೆ ಮಾನಸಿಕ ಸ್ಥೈರ್ಯ, ಏಕಾಗ್ರತೆ ಹಾಗೂ ನಾಯಕತ್ವ ಗುಣಗಳು ಬೆಳೆಯುತ್ತವೆ. ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಕ್ರೀಡೆಯ ಮಹತ್ವವನ್ನು ಶಿಕ್ಷಕರು ತಿಳಿಸಬೇಕು ಎಂದು ಸಲಹೆ ನೀಡಿದರು.

ಸಿದ್ಧಾರ್ಥ ಪಬ್ಲಿಕ್ ಸ್ಕೂಲ್ ಕಾರ್ಯದರ್ಶಿ ರಾಮಣ್ಣ ಖಾನಾಪುರ ಮಾತನಾಡಿ, ಗ್ರಾಮೀಣ ಭಾಗದಲ್ಲಿರುವ ಪ್ರತಿಭಾವಂತ ಮಕ್ಕಳು ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡುವಂತಾಗಬೇಕು. ಗ್ರಾಮೀಣ ಹಿನ್ನೆಲೆಯಿಂದ ಬೆಳೆದು ಬಂದ ನೀರಜ್ ಚೋಪ್ರಾ ಅವರಂತಹ ಕ್ರೀಡಾಪಟುಗಳು ದೇಶಕ್ಕೆ ಹೆಮ್ಮೆ ತಂದಿದ್ದಾರೆ. ವಿದ್ಯಾಭ್ಯಾಸದ ಜತೆಗೆ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ದೈಹಿಕ ಶಿಕ್ಷಕರು ಪ್ರೋತ್ಸಾಹಿಸಿ, ಪ್ರತಿಭೆಗಳನ್ನು ಗುರುತಿಸಬೇಕು ಎಂದರು. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಅಭಿನಂದಿಸಿದರು.

ಶಿಕ್ಷಣ ಸಂಯೋಜಕ ಎ.ಬಿ. ಬಗಲಿ ಹಾಗೂ ಸಿದ್ಧಾರ್ಥ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ದಾಸಪ್ಪ ಮಾತನಾಡಿ, ನಿಯಮಿತವಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಕ್ಷಮತೆ ಹೆಚ್ಚುವುದರೊಂದಿಗೆ ಏಕಾಗ್ರತೆ ಮತ್ತು ಕಲಿಕೆಯ ಸಾಮರ್ಥ್ಯವೂ ವೃದ್ಧಿಯಾಗುತ್ತದೆ. ಕ್ರೀಡಾಕೂಟದಲ್ಲಿ ಗೆಲುವಿಗಿಂತ ಶಿಸ್ತುಬದ್ಧವಾಗಿ ಭಾಗವಹಿಸುವುದು ಹಾಗೂ ಕ್ರೀಡಾ ಮನೋಭಾವ ಬೆಳೆಸಿಕೊಳ್ಳುವುದು ಮುಖ್ಯ. ಸೋಲನ್ನು ನಿರಾಶೆಯಾಗಿ ಕಾಣದೆ, ಮುಂದಿನ ಗೆಲುವಿಗೆ ಮೆಟ್ಟಿಲನ್ನಾಗಿ ಪರಿಗಣಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕ್ರೀಡಾಕೂಟದಲ್ಲಿ ರಕ್ಕಸಗಿ, ಹಿರೇಮುರಾಳ, ಆಲೂರ, ಅಡವಿಸೋಮನಾಳ ಹಾಗೂ ನಾಲತವಾಡ ಕ್ಲಸ್ಟರ್‌ಗಳ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಬಡ್ಡಿ, ಖೋ-ಖೋ, ವಾಲಿಬಾಲ್, ಥ್ರೋಬಾಲ್, ಗುಂಡು ಎಸೆತ ಹಾಗೂ ವಿವಿಧ ಓಟದ ಸ್ಪರ್ಧೆಗಳು ನಡೆದವು. ವಿಜೇತ ವಿದ್ಯಾರ್ಥಿಗಳ ತಂಡಗಳಿಗೆ ಪ್ರಶಸ್ತಿ ಪತ್ರ ಹಾಗೂ ಆಕರ್ಷಕ ಟ್ರೋಫಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಿದ್ಧಾರ್ಥ ಪಬ್ಲಿಕ್ ಸ್ಕೂಲ್ ಅಧ್ಯಕ್ಷೆ ಸರಸ್ವತಿ ಖಾನಾಪುರ, ನಿರ್ದೇಶಕ ಗೌತಮ್ ಖಾನಾಪುರ, ಶಿಕ್ಷಕರ ಸೊಸೈಟಿ ಅಧ್ಯಕ್ಷ ಪವಾಡಬಸು ಭೂವೇರ್, ಎ.ಜೆ. ದಖನಿ, ಎ.ಸಿ. ಕಸಬೆಗೌಡರ, ಸಿಆರ್‌ಪಿ ಎಂ.ವಿ. ನೂಲಿನವರ, ಬಿ.ಎಸ್. ಹೂಳಿ, ಬಸನಗೌಡ ಭಗವತಿ, ದೈಹಿಕ ಶಿಕ್ಷಕರಾದ ಜಗದೀಶ ನಾಡಗೌಡ, ಬಿ.ವಿ. ಹಿರೇಮಠ, ಮುತ್ತು ಮಾದರ ಸೇರಿದಂತೆ ವಿವಿಧ ಕ್ಲಸ್ಟರ್‌ಗಳ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿಕ್ಷಕ ನಾಗರಾಜ ಪತ್ತಾರ ಸ್ವಾಗತಿಸಿದರು. ಶಿಕ್ಷಕಿ ಸುಜಾತಾ ಅಥಣಿ ನಿರೂಪಿಸಿದರು. ಶಿಕ್ಷಕಿ ಮಂಜುಳಾ ಹೂಗಾರ ವಂದಿಸಿದರು.

# ಅಕ್ಟೋಬರ್ 5ರೊಳಗೆ ನಾಗರಬೆಟ್ಟ ಏತನೀರಾವರಿಗೆ ಟೆಸ್ಟಿಂಗ್ ನೀರು ಹರಿಸಿ

## ತಪ್ಪಿದರೆ ರಸ್ತೆತಡೆ, ಅನಿರ್ದಿಷ್ಟಾವಧಿ ಧರಣಿ: ಶಾಂತಗೌಡ ಪಾಟೀಲ್ ಎಚ್ಚರಿಕೆ

**ಅ.ಶ. ಸುದ್ದಿ ಮುದ್ದೇಬಿಹಾಳ**

**ಮುದ್ದೇಬಿಹಾಳ: ನಾಗರಬೆಟ್ಟ ಏತನೀರಾವರಿ ಯೋಜನೆಯ ಟೆಸ್ಟಿಂಗ್‌ಗಾಗಿ ಅಕ್ಟೋಬರ್ 5ರೊಳಗೆ ಮುಖ್ಯ ಕಾಲುವೆಗಳ ಮೂಲಕ ನೀರು ಹರಿಸಬೇಕು. ಇಲ್ಲವಾದರೆ ನಾಗರಬೆಟ್ಟದಲ್ಲಿ ರೈತರೊಂದಿಗೆ ಬೃಹತ್ ರಸ್ತೆತಡೆ ಹಾಗೂ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ್ ನಡಹಳ್ಳಿ ಎಚ್ಚರಿಸಿದರು.**

ಪಟ್ಟಣದ ಖಾಸಗಿ ಹೋಟೆಲ್ ಸಭಾಭವನದಲ್ಲಿ ಭಾನುವಾರ ರೈತ ಸಂಘ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗರಬೆಟ್ಟ ಏತನೀರಾವರಿ ಯೋಜನೆಯಿಂದ ಮುದ್ದೇಬಿಹಾಳ ತಾಲೂಕಿನ 14 ಗ್ರಾಮಗಳ ಸುಮಾರು 3,200 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.



2018ರಲ್ಲಿ ಟೆಂಡರ್ ಪ್ರಕ್ರಿಯೆ ನಡೆದಿದ್ದರೂ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯೋಜನೆ ಪೂರ್ಣಗೊಳಿಸಿ ನೀರು ಹರಿಸುವಂತೆ ಒತ್ತಾಯಿಸಿ ರೈತ ಸಂಘದಿಂದ ಆಲಮಟ್ಟಿಯಲ್ಲಿ ಸುಮಾರು 10 ಸಾವಿರ ರೈತರೊಂದಿಗೆ ಬೃಹತ್ ಹೋರಾಟ ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮೂರು ತಿಂಗಳಲ್ಲಿ ನೀರು ಹರಿಸುವುದಾಗಿ ಲಿಖಿತ ಭರವಸೆ ನೀಡಿದ್ದ-ರಿಂದ ಹೋರಾಟ ಹಿಂಪಡೆಯಲಾಗಿತ್ತು. ಆದ-’ರೆ ಗಡುವು ಮುಗಿದರೂ ಕಾಮಗಾರಿ ಹಾಗೂ ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಪೂರ್ಣಗೊಂಡಿಲ್ಲ ಎಂದು ಹೇಳಿದರು.

ಭೂಸ್ವಾಧೀನಕ್ಕೆ ಸಂಬಂಧಿಸಿದ ರೈತರು ಕನ್ಸೆಂಟ್ ಅವಾರ್ಡ್‌ಗೆ ಒಪ್ಪಿಗೆ ನೀಡಿದ್ದರೂ ‘ಐ ತೀರ್ಪು’ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿಳಂಬ ಧೋರಣೆಯಿಂದ ಕಡತ ಮುಂದಕ್ಕೆ ಸಾಗುತ್ತಿಲ್ಲ ಎಂದು ಆರೋಪಿಸಿದರು. ಭೂಸ್ವಾಧೀನ ಕಾಯ್ದೆ-2013ರ ಪ್ರಕಾರ ನಿಗದಿತ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಒಪ್ಪಿಗೆ ನೀಡದವರಿಗೆ ನಿಯಮಾನುಸಾರ ಜನರಲ್ ಅವಾರ್ಡ್ ಮಾಡಿ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು. ಮುದ್ದೇಬಿಹಾಳ ತಾಲೂಕು ಬರ ಘೋಷಣೆ ವಿಚಾರದಲ್ಲಿ ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ ಅವರಿಂದ ತಪ್ಪಾಗಿದೆ ಎಂದು ನಡಹಳ್ಳಿ ಆರೋಪಿಸಿದರು. ಬರಗಾಲದ ಕುರಿತು ಕೆಡಿಪಿ ಸಭೆ ನಡೆಸಿಲ್ಲ, ಜಿಲ್ಲಾ ಕೆಡಿಪಿ ಸಭೆಗೆ ಹಾಜರಾಗಿಲ್ಲ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ತಾಲೂಕಿಗೆ ಬರ ಅಧ್ಯಯನಕ್ಕೆ ಆಗಮಿಸುವಂತೆ ಕರೆ ನೀಡಿದಾಗಲೂ ಸ್ಪಂದಿಸಿಲ್ಲ ಎಂದು ಹೇಳಿದರು.

ಮುಖ್ಯ ಕಾಲುವೆಗಳನ್ನು ನಿರ್ಮಿಸಿರುವುದರಿಂದ ರೈತರ ಹೊಲಗಳಿಗೆ ನೀರು ಹರಿಸಲು ಸಾಧ್ಯವಾಗಿದೆ. ಇದಕ್ಕಾಗಿ ಸಚಿವ ಎಂ.ಬಿ. ಪಾಟೀಲರನ್ನು ರೈತ ಸಂಘ ಅಭಿನಂದಿಸುತ್ತದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಯಮನಪ್ಪ ರಕ್ಕಸಗಿ, ರವಿಕುಮಾರ್ ಸಿದರೆಡ್ಡಿ, ಪರಮಪ್ಪ ಗು-ರಿಕಾರ, ಮಲ್ಲಪ್ಪ ರಕ್ಕಸಗಿ, ಕರೆಪ್ಪ ಕೇಸಾಪೂರ, ಸುಭಾಷ್‌ಚಂದ್ರ ಭೋಗಾಪೂರ, ದಂಡಪ್ಪ ಚಲವಾದಿ, ಲಕ್ಕಪ್ಪ ಬಂಗಾರಗುಂಡ, ಆನಂದ ಪಾಟೀಲ್, ಪ್ರಭು ಚಲವಾದಿ, ಅಮರೇಶ ಬಾಗೇವಾಡಿ, ಹಣಮಂತರಾಯ ಬಿರಾದಾರ, ಬಸನಗೌಡ ಪಾಟೀಲ್, ಸಿದ್ದಪ್ಪ ಸೋಮನಾಳ ಸೇರಿದಂತೆ ಹಲವು ರೈತರು ಉಪಸ್ಥಿತರಿದ್ದರು.

# ಪಡಿತರ ಕಾರ್ಡ್ ಇ-ಕೆವೈಸಿಗೆ ಸರ್ವರ್ ಸಮಸ್ಯೆ-ಫಲಾನುಭವಿಗಳ ಪರದಾಟ





**ಕನಕಗಿರಿ: ಪಟ್ಟಣ ಸೇರಿದಂತೆ ತಾಲೂಕಿನ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಕಾರ್ಡ್ ಇ-ಕೆವೈಸಿ ಮಾಡಿಸಲು ಸರ್ವರ್ ಸಮಸ್ಯೆ ಉಂಟಾಗಿದ್ದು, ಫಲಾನುಭವಿಗಳು ಪರದಾಡುವಂತಾಗಿದೆ. ಬೆಳಿಗ್ಗೆಯಿಂದಲೇ ಅಂಗಡಿಗಳ ಮುಂದೆ ಸಾಲುಗಟ್ಟಿ ನಿಂತರೂ ಸರ್ವರ್ ಡೌನ್ ಆಗಿರುವುದ-ರಿಂದ ಬೆರಳಚ್ಚು ಪಡೆಯಲು ಸಾಧ್ಯವಾಗುತ್ತಿಲ್ಲ.**

ಇದರಿಂದ ಪಡಿತರ ವಿತರಣೆಗೂ ತೊಂದರೆಯಾಗಿದೆ ಎಂದು ಗ್ರಾಹಕರು ದೂರಿದ್ದಾರೆ. ಸರ್ಕಾರ ಕಡ್ಡಾಯವಾಗಿ ಇ-ಕೆವೈಸಿ ಮಾಡಿಸಲು ಸೂಚಿಸಿದ್ದು, ಕೊನೆಯ ದಿನಾಂಕ ಸಮೀಪಿಸುತ್ತಿದ್ದರೂ ತಾಂತ್ರಿಕ ಸಮಸ್ಯೆ ಬಗೆಹ-ರಿದಿಲ್ಲ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಶೀಘ್ರ ಸರ್ವರ್ ಸಮಸ್ಯೆ ಸರಿಪಡಿಸಬೇಕು ಎಂದು ಫಲಾನುಭವಿಗಳು ಒತ್ತಾಯಿಸಿದ್ದಾರೆ. ತಾಲೂಕಿನಲ್ಲಿ ಒಟ್ಟು 24 ನ್ಯಾಯ ಬೆಲೆ ಅಂಗಡಿ ಇದ್ದು ಪಟ್ಟಣದಲ್ಲಿ 3 ಗ್ರಾಮೀಣ ಪ್ರದೇಶದಲ್ಲಿ 21 ನ್ಯಾಯ ಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಬೆಳಿಗ್ಗೆಯಿಂದ ನ್ಯಾಯಬೆಲೆ ಅಂಗಡಿ ಮುಂದೆ ಕಾಯುತ್ತಿದ್ದೇವೆ, ಸರ್ವರ್ ಇಲ್ಲ ಎಂದು ವಾಪಸ್ ಕಳುಹಿಸುತ್ತಿದ್ದಾರೆ. ಕೂಲಿ ಕೆಲಸ ಬಿಟ್ಟು ಬಂದರೂ ಕೆಲಸವಾಗುತ್ತಿಲ್ಲ.

> **ತಾಲೂಕಿನಲ್ಲಿ ಒಟ್ಟು 24 ನ್ಯಾಯ ಬೆಲೆ ಅಂಗಡಿ ಇದ್ದು. ಪಡಿತರ ಚೀಟಿ ಇ-ಕೆವೈಸಿ ಸರ್ವರ್ ಸಮಸ್ಯೆ ರಾಜ್ಯಾದ್ಯಂತ ಇದೆ. ತಾಲೂಕಿನಲ್ಲಿ ಈ ಬಗ್ಗೆ ಈಗಾಗಲೇ ಮೇಲಾಧಿಕಾರಿಗಳ ಗಮನಕ್ಕೆ ತಂದು ಪತ್ರ ಬರೆಯಲಾಗಿದೆ. ಆಹಾರ ಇಲಾಖೆಯ ಪ್ರತಿಯೊಂದು ಕೆಲಸಕ್ಕೂ ಸರ್ವರ್ ಸಮಸ್ಯೆಯಾಗುತ್ತಿದೆ ಸಾರ್ವಜನಿಕರು ಸಾಹಕರಿಸ ಬೇಕಾಗಿದೆ. ಬಸವರಾಜ ಅಂಗಡಿ**
> **-ತಾಲೂಕು ಆಹಾರ ನಿರೀಕ್ಷಕರು ಕನಕಗಿರಿ**

# ಬೆಂಗಳೂರಿಗರೇ ಗಮನಿಸಿ :ಸೆ. 22ರಂದು ಈ ಏರಿಯಾಗಳಲ್ಲಿ ಕಾವೇರಿ ನೀರು ಬರಲ್ಲ

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ಕಾವೇರಿ ನೀರು ಸರಬರಾಜು ವ್ಯವಸ್ಥೆಯ 1ನೇ ಹಂತದ ಜಲರೇಚಕ ಯಂತ್ರಾಗಾರದಲ್ಲಿ ತುರ್ತು ದುರಸ್ತಿ ಕಾಮಗಾರಿ ಕೈಗೊಳ್ಳಲಾಗುತ್ತಿರುವ ಹಿನ್ನೆಲೆಯಲ್ಲಿ ಸೆ.22ರಂದು ನಗರದ ಹಲವು ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.**



ಕಾವೇರಿ ನೀರು ಸರಬರಾಜು ಯೋಜನೆಯ 1ನೇ ಹಂತದ ಜಲರೇಚಕ ಯಂತ್ರಾಗಾರದಲ್ಲಿರುವ ಪಂಪ್ ಸಂಖ್ಯೆ-4ರ ಹಾಗೂ ದುರಸ್ತಿ ಕಾಮಗಾರಿ ಕೈಗೊಳ್ಳಲು ಬೆಂಗಳೂರು ಜಲಮಂಡಳಿ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸೆ.22ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಒಟ್ಟು ಆರು ಗಂಟೆಗಳ ಕಾಲ ಕಾವೇರಿ ನೀರು ಸರಬರಾಜು ಯೋಜನೆಯ 1ನೇ ಹಂತದ ಜಲರೇಚಕ ಯಂತ್ರಾಗಾರಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು. ದುರಸ್ತಿ ಕಾಮಗಾ-ರಿಯ ಅವಧಿಯಲ್ಲಿ ನೀರು ಪಂಪಿಂಗ್ ವ್ಯವಸ್ಥೆ ಸ್ಥಗಿತಗೊಳ್ಳುವುದ-ರಿಂದ ಸಂಬಂಧಪಟ್ಟ ಪ್ರದೇಶಗಳಿಗೆ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ. ಕಾಮಗಾರಿ ಪೂರ್ಣಗೊಂಡ ಬಳಿಕ ನೀರು ಸರಬರಾಜು ವ್ಯವಸ್ಥೆಯನ್ನು ಹಂತ ಹಂತವಾಗಿ ಪುನರಾರಂಭಿಸಲಾಗುವುದು ಎಂದು ಜಲಮಂಡಳಿ ತಿಳಿಸಿದೆ. ನೀರಿನ ವ್ಯತ್ಯಯದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಅಗತ್ಯ ಪ್ರಮಾಣದ ನೀರನ್ನು ಮುಂಚಿತವಾಗಿಯೇ ಸಂಗ್ರಹಿಸಿಟ್ಟುಕೊಳ್ಳುವಂತೆ ಬೆಂಗಳೂರು ಜಲಮಂಡಳಿ ನಾಗ-ರಿಕರಿಗೆ ಮನವಿ ಮಾಡಿದೆ. ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಪ್ರದೇಶಗಳ ವಿವರಗಳನ್ನು ಜಲಮಂಡಳಿ ಪ್ರಕಟಿಸಿರುವ ಮಾಹಿತಿಯೊಂದಿಗೆ ಲಗತ್ತಿಸಲಾಗಿದೆ. ದುರಸ್ತಿ ಕಾಮಗಾರಿ ಸಂದರ್ಭದಲ್ಲಿ ಸಾರ್ವಜನಿಕರು ಸಹಕರಿಸುವಂತೆ ಜಲಮಂಡಳಿ ಮನವಿ ಮಾಡಿದೆ.

# ಗೋಡೆಗಳಿಗೆ ಬಣ್ಣ, ಮಕ್ಕಳ ಭವಿಷ್ಯಕ್ಕೆ ಹೊಸ ಚಿಂತನೆ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ತಾಲೂಕಿನ ಕಿನ್ನಾಳ ಗ್ರಾಮದಲ್ಲಿ ಹಿಂದೂ ಮಹಾ ಮಂಡಳಿ ಕಾಮನಕಟ್ಟಿ ಗೆಳೆಯರ ಬಳಗದ ವತಿಯಿಂದ ಸರ್ಕಾರಿ ಶಾಲೆಗಳ ಆವರಣ ಹಾಗೂ ಕಾಂಪೌಂಡ್‌ಗಳಿಗೆ ಸುಣ್ಣಬಣ್ಣ ಹಚ್ಚುವ ವಿನೂತನ ಸಾಮಾಜಿಕ ಸೇವಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.**

ಶಾಲಾ ಗೋಡೆಗಳ ಮೇಲೆ ಶಿಕ್ಷಣ, ಸ್ವಚ್ಛತೆ, ಪರಿಸರ ಸಂರಕ್ಷಣೆ, ದೇಶಪ್ರೇಮ, ಶಿಸ್ತು ಹಾಗೂ ಮಾನವೀಯ ಮೌಲ್ಯಗಳ ಕುರಿತು ಪ್ರೇರಣಾದಾಯಕ ವಾಕ್ಯಗಳು ಮತ್ತು ಚಿತ್ರಗಳನ್ನು ಬಿಡಿಸುವ ಮೂಲಕ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಉದ್ದೇಶವನ್ನು ಬಳಗ ಹೊಂದಿದೆ. ಶಾಲೆಗಳು ಕೇವಲ ಪಾಠ ಕಲಿಸುವ







ಸ್ಥಳಗಳಾಗಿರದೆ, ಮಕ್ಕಳ ಚಿಂತನೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪ್ರೇರಣೆಯಾಗಬೇಕು ಎಂಬ ಆಶಯದಿಂದ ಈ ಕಾರ್ಯ ಕೈಗೊಳ್ಳಲಾಗಿದೆ.

ಗೋಡೆಗಳ ಮೇಲಿನ ಸಂದೇಶಗಳು ವಿದ್ಯಾರ್ಥಿಗಳಿಗೆ ಪ್ರತಿದಿನವೂ ಹೊಸ ವಿಚಾರಗಳನ್ನು ಕಲಿಯಲು ಸಹಕಾರಿಯಾಗಲಿವೆ ಎಂದು ಬಳಗದ ಪದಾಧಿಕಾರಿಗಳು ತಿಳಿಸಿದ್ದಾರೆ. ಈ ಸಮಾಜಮುಖಿ ಕಾರ್ಯಕ್ಕೆ ಗ್ರಾಮದ ಗುರುಹಿರಿಯರು, ಶಿಕ್ಷಕರು, ಹಳೆ ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು ಹಾಗೂ ಸಾರ್ವಜನಿಕರು ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ.

# ಚಿನ್ನದ ಪದಕ ಗೆದ್ದು ಕೀರ್ತಿ ತಂದ ಸಾಯಿ ಬುಡೋಕನ್ ಕರಾಟೆ ಕ್ಲಬ್

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ 2026ರಲ್ಲಿ ಕೊಪ್ಪಳದ ಸಾಯಿ ಬುಡೋಕನ್ ಕರಾಟೆ ಸಂಸ್ಥೆಯ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದು, ಎರಡು ಚಿನ್ನದ ಪದಕಗಳನ್ನು ಗೆದ್ದು ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ದಸರಾ ಕ್ರೀಡಾಕೂಟದ ಕರಾಟೆ ಸ್ಪರ್ಧೆಯಲ್ಲಿ ಸಾಯಿ ಬುಡೋಕನ್ ಕರಾಟೆ ಸಂಸ್ಥೆಯ ಪರವಾಗಿ ನಾಲ್ವರು ವಿದ್ಯಾರ್ಥಿಗಳು ಹಾಗೂ ಒಬ್ಬ ಶಿಕ್ಷಕರು ಭಾಗವಹಿಸಿದ್ದರು.**

ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡುವ ಮೂಲಕ ಎರಡು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಚಿನ್ನದ ಪದಕ ವಿಜೇತರು: 84 ಕೆ.ಜಿ. ವಿಭಾಗ: ಅಭಿಷೇಕ್ ಗೊಂಡಬಾಳ, ಪ್ರಥಮ ಸ್ಥಾನ



55 ಕೆ.ಜಿ. ವಿಭಾಗ: ಆನಂದ ಕುಮಾರ, ಪ್ರಥಮ ಸ್ಥಾನ ವಿದ್ಯಾರ್ಥಿಗಳ ಸಾಧನೆಗೆ ಮುಖ್ಯ ತರಬೇತುದಾರ ರಾಜಬಕ್ಷಿ ಎಚ್.ವಿ. ಹಾಗೂ ಸಂಸ್ಥೆಯ ಮುಖ್ಯ ತರಬೇತುದಾರ ಶ್ರೀಕಾಂತ ಕಲಾಲ್ ಸೇರಿದಂತೆ ಚಿರಂಜೀವಿ, ಮೌಲಾ, ಗಣೇಶ್ ಮತ್ತು ಸಂತೋಷ್ ಉಪಸ್ಥಿತರಿದ್ದು ಅಭಿನಂದನೆ ಸಲ್ಲಿಸಿದರು. ವಿದ್ಯಾರ್ಥಿಗಳ ಈ ಸಾಧನೆಗೆ ಕ್ರೀಡಾ ಅಧಿಕಾ-ರಿಗಳು, ತರಬೇತುದಾರರು ಹಾಗೂ ಪೋಷಕರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಜಿಟಿ ಜಿಟಿ ಮಳೆಯಿಂದ ಬೆಂಗಳೂರು ಕೂಲ್ ಕೂಲ್

**ಅ.ಶ. ಸುದ್ದಿ ಬೆಂಗಳೂರು**

**ಬೆಂಗಳೂರು: ನಗರದಲ್ಲಿ ನಿನ್ನೆ ರಾತ್ರಿಯಿಂದಲೇ ಜಿಟಿ ಜಿಟಿ ಮಳೆ ಮುಂದುವರಿದಿದ್ದು, ಇಂದು ಬೆಳಗ್ಗೆಯೂ ನಗರದ ಹಲವು ಭಾಗಗಳಲ್ಲಿ ಮಳೆಯಾಗಿದೆ. ಟೌನ್‌ಹಾಲ್, ಕೆ.ಆರ್. ಮಾರ್ಕೆಟ್, ಎಸ್‌ಪಿ ರಸ್ತೆ, ಚಿಕ್ಕಪೇಟೆ, ಸುಧಾಮನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಮಳೆ ಸುರಿದಿದ್ದು, ನಗರದ ವಾತಾವರಣ ಸಂಪೂರ್ಣ ತಂಪಾಗಿದೆ.**

ಮಳೆಯೊಂದಿಗೆ ತಣ್ಣನೆಯ ಗಾಳಿ ಬೀಸುತ್ತಿದ್ದು, ನಗರದ ಜನತೆ ಕೂಲ್ ಕೂಲ್ ವಾತಾವರಣದ ಅನುಭವ ಪಡೆಯುತ್ತಿದ್ದಾರೆ. ಈ ವರ್ಷದ ಅವಧಿಯಲ್ಲಿ ಬೆಂಗಳೂರಿನಲ್ಲಿ ಕನಿಷ್ಠ ಮಟ್ಟಕ್ಕೆ ತಾಪಮಾನ ಇಳಿಕೆಯಾಗಿದೆ. ಹಳೆ ಮದ್ರಾಸ್ ರಸ್ತೆಯಲ್ಲಿ ಇಂದು ಬೆಳಗ್ಗೆ 18.2 ಡಿಗ್ರಿ ಸೆಲ್ಸಿಯಸ್ ತಾಪಮಾನ



ದಾಖಲಾಗಿದ್ದು, ನಗರದ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಸದ್ಯ ನಗರದಲ್ಲಿ ಸುಮಾರು 24 ಡಿಗ್ರಿ ಸೆಲ್ಸಿಯಸ್ ತಾಪಮಾನವಿದ್ದು, ತಂಪಾದ ವಾತಾವರಣ ಮುಂದುವರಿದಿದೆ.49 ಮಿ.ಮೀ. ಸರಾಸರಿ ಮಳೆನಿನ್ನೆ ರಾತ್ರಿ ಆರಂಭಗೊಂಡ ಮಳೆ ಇದೀಗಲೂ ನಗರದ ಹಲವು ಭಾಗಗಳಲ್ಲಿ ಮುಂದುವರಿದಿದೆ. ಕಳೆದ ರಾತ್ರಿ ನಗರದಲ್ಲಿ ಸರಾಸರಿ ಸುಮಾರು 49 ಮಿ.ಮೀ. ಮಳೆ ದಾಖಲಾಗಿದೆ. ಈ ಪೈಕಿ ಬೆಳ್ಳಂದೂರಿನಲ್ಲಿ ಅತಿ ಹೆಚ್ಚು 82.4 ಮಿ.ಮೀ. ಮಳೆಯಾಗಿದೆ.

# ನಾನು ರಾಜಕಾರಣಕ್ಕೆ ಬಂದಿರುವದು ಅಭಿವೃದ್ಧಿ ಕೆಲಸಕ್ಕಾಗಿ: ರಾಯರೆಡ್ಡಿ

**ಅ.ಶ. ಸುದ್ದಿ ಕುಕನೂರು**

**ಕುಕನೂರ: ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ಎಂಬ ತತ್ವದ ಮೇಲೆ ನಂಬಿಕೆ ಇಟ್ಟುವನು ನಾನು ನನ್ನನ್ನು ಟೀಕಿಸುವವರು ನಾನು ಮಾಡಿದ ಅಭಿವೃದ್ಧಿ ಕೆಲಸಗಳನ್ನು ಒಮ್ಮೆ ನೋಡಿಕೊಂಡು ಬರಲಿ ನಾನು ರಾಜ-ಕಾರಣಕ್ಕೆ ಬಂದಿರೋದೆ ಅಭಿವೃದ್ಧಿ ಕೆಲಸಕ್ಕಾಗಿ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹೇಳಿದರು.**

ತಾಲೂಕಿನ ಮಸಬ ಹಂಚಿನಾಳ, ಬಿನ್ನಾಳ, ಭಾನಾಪುರ,ಗ್ರಾಮಗಳಲ್ಲಿ ಜನ ಸಂದರ್ಶನ ಹಾಗೂ ಚಿಕೇನಕೊಪ್ಪ, ಭಾನಾಪೂರ ಶಾಲೆಗಳ ನೂತನ ಶಾಲಾ ಕೊಠಡಿಗಳ ಉಧ್ಘಾಟನೆ ಕಾರ್ಯಕ್ರಮ ನ ನೆರವೇರಿಸಿ ಮಾತನಾಡಿ ತಾಲೂಕಿನಲ್ಲಿ ಇದುವರೆಗೂ ಒಂದು ರೂಪಾಯಿ ಕೆಲಸ ಮಾಡದವರು ನನ್ನನು ಸುಖಾ ಸುಮ್ಮನೆ ಟೀಕಿಸುತ್ತಾರೆ, ಮೋದಿ ಮೋದಿ ಎಂದು ಹೇಳುವವರು ಕೇಂದ್ರ ಸರ್ಕಾರ ಒಂದು ರೂಪಾಯಿ ಕೊಡುತ್ತಿಲ್ಲ ಅದರ



ಬಗ್ಗೆ ಯಾರು ಕೇಳುತ್ತಿಲ್ಲ, ನಾವು ರಾಜ್ಯ ಸರ್ಕಾರದವರು ಮಹಿಳೆಯರಿಗೆ ಬಸ್ ಫ್ರೀ ಮಾಡಿದ್ದೇವೆ, ನೀವು ಮೋದಿ ಮೋದಿ ಎಂದು ಹೇಳುವವರು ರೈಲು ಪ್ರಯಾಣ ಉಚಿತ ಬಿಡಿಸಲಿ ನೋಡೋಣ ಎಂದು ಸವಾಲು ಹಾಕಿದರು.

ಉದ್ಯೋಗ ಖಾತ್ರಿ ಯೋಜನೆಯನ್ನು ವಿಬಿ ರಾಮ್ ಜಿ ಎಂದು ಮರು ನಾಮಕರಣ ಮಾಡಿ ಅದಕ್ಕೆ ಹಣ ನೀಡುತ್ತಿಲ್ಲ ಈ ಮೊದಲು ಯುಪಿಎ ಅವಧಿಯಲ್ಲಿ ಶೇ 90 ರಷ್ಟು ಹಣ ನೀಡುತ್ತಿದ್ದೇವೆ ಆದರೆ ಈಗ ಕೇಂದ್ರ ಸರ್ಕಾರ ಕೇವಲ ಶೇ. 60 ರಷ್ಟು ಮಾತ್ರ ನೀಡುತ್ತದೆ. ಇನ್ನೊಂದು ತಿಂಗಳಿನಲ್ಲಿ ಮುಖ್ಯ ಮಂತ್ರಿ ಡಿಕೆ ಶಿವಕುಮಾರ್




ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕ್ಷೇತ್ರಕ್ಕೆ ಕರೆಯಿಸಿ ಶಾಶ್ವತ ಕುಡಿಯುವ ನೀರಿನ ಯೋಜನೆ ಅನುಷ್ಠಾನ ಗೊಳಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಬಸವರಾಜ ಬೆಣ್ಣೆ ಶಿರೂರು, ಇ ಓ ಬೆಟದಪ್ಪ ಮಾಳೆಕೊಪ್ಪ, ಆಹಾರ ಇಲಾಖೆ ಅಧಿಕಾರಿ ಮಂಜುನಾಥ, ಚತ್ರಪ್ಪ ಮುಧೋಳ, ಜೆಸ್ಕಾಂ ಅಧಿಕಾರಿ ನಾಗರಾಜ್ ಮುಖಂಡರಾದ ಹನುಮಂತ ಗೌಡ ಚಂಡೂರು, ಕೆರಿಬಸಪ್ಪ ನೀಡಗುಂದಿ, ಮಂಜುನಾಥ್ ಕಡೇಮನಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗಮೇಶ್ ಗುತ್ತಿ, ಸುಧೀರ್ ಕೊರ್ಲಹಳ್ಳಿ, ಸಂತೋಷ ಮೆಣಸಿಕಾಯಿ, ರವಿ ಬಜೇಂತ್ರಿ, ರಾಘು ಕಾತರಕಿ, ಮಹೇಶ ಗಾವರಾಳ, ಮಹೇಂದ್ರ ಗದಗ ಸೇರಿದಂತೆ ಇತರರು ಇದ್ದರು.

> **ನಾನು ರಾಜಕಾರಣದಲ್ಲಿ ಯಾರ ವಿರೋಧಿಯು ಅಲ್ಲಾ, ನಾನು ರಾಜಕಾರಣ ಮಾಡುತ್ತಿರುವುದು ಕ್ಷೇತ್ರದ ಅಭಿವೃದ್ದಿಗೆ ಮಾಡುತ್ತಿದ್ದೇನೆ. ಈಗ ಹಾಲಪ್ಪ ಬಂದು ಕರೆದರು ನಾನು ಅವರ ಮನೆಗೆ ಹೋಗಿ ಟೀ ಕುಡಿದು ಬರುತ್ತೇನೆ, ಪತ್ರಿಕೆಯವರು ಏನೇನೋ ಬರೆಯುತ್ತಾರೆ. ನಾನು ಹಾಲಪ್ಪನೊಂದಿಗೆ ಚೆನ್ನಾಗಿಯೇ ಇದ್ದೇನೆ.**
> **ಉನ್ನತ ಶಿಕ್ಷಣ ಸಚಿವರು ಹಾಗೂ ಶಾಸಕ ಬಸವರಾಜ ರಾಯರಡ್ಡಿ.**

# ಹಕ್ಕುಪತ್ರದ ನಿರೀಕ್ಷೆಯಲ್ಲಿದ್ದ 12 ಸಾವಿರ ಕುಟುಂಬಗಳಿಗೆ ಜಿಲ್ಲಾಡಳಿತದ ಭರವಸೆ

## ಅಕ್ರಮ ಬೋರ್‌ವೆಲ್, ಮಣ್ಣು ತೆಗೆಯುವವರಿಗೆ ಎಚ್ಚರಿಕೆ: ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ

ಅ.ಶ. ಸುದ್ದಿ ಶಿಲಫಟ್ಟ



**ಶಿಡ್ಲಘಟ್ಟ: ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡು ಹಲವು ವರ್ಷಗಳಿಂದ ವಾಸಿಸುತ್ತಿರುವ ಸುಮಾರು 12 ಸಾವಿರ ಕುಟುಂಬಗಳಿಗೆ ಶಾಶ್ವತ ಮಾಲೀಕತ್ವದ ಹಕ್ಕು ಕಲ್ಪಿಸುವ ಉದ್ದೇಶದಿಂದ ಕಂದಾಯ ಗ್ರಾಮಗಳ ವಿಶೇಷ ಅಭಿಯಾನ ನಡೆಸಲಾಗುತ್ತಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.**

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು, ಪಿಡಿಒಗಳು ಹಾಗೂ ಸರ್ವೇಯರ್‌ಗಳಿಗೆ ಕಂದಾಯ ಗ್ರಾಮಗಳ ಕುರಿತಂತೆ ಸಮಗ್ರ ತರಬೇತಿ ನೀಡಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಖಾಸಗಿ ಜಮೀನು ಹಾಗೂ ಕಂದಾಯ ದಾಖಲೆಗಳ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಕುಟುಂಬಗಳಿಗೆ ಹಕ್ಕುಪತ್ರ ಒದಗಿಸಿ, ಅವರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ.

10ಕ್ಕಿಂತ ಹೆಚ್ಚು ಮನೆಗಳಿರುವ ಗ್ರಾಮಗಳನ್ನು ಅಗತ್ಯ ಮಾನದಂಡಗಳ ಆಧಾರದ ಮೇಲೆ ಉಪಗ್ರಾಮಗಳಾಗಿ ಘೋಷಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 1.10 ಲಕ್ಷಕ್ಕೂ ಅಧಿಕ ಹಕ್ಕುಪತ್ರಗಳನ್ನು ವಿತರಿಸುವ ಗುರಿ ಹೊಂದಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಇದೇ ವೇಳೆ ಹಲವು ತಲೆಮಾರುಗಳಿಂದ ಆಸ್ತಿಗಳಿಗೆ ಪೌತಿ ಖಾತೆ ಮಾಡಿಸದೆ ಇರುವ ಕುಟುಂಬಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪೌತಿ ಖಾತಾ ಅಭಿಯಾನ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪೌತಿ ಖಾತೆಗಳನ್ನು ಮಾಡಿಕೊಡುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

**ಬರ ಪರಿಸ್ಥಿತಿ ಪರಿಶೀಲನೆ**

ಜಿಲ್ಲೆಯ ಎಂಟು ತಾಲೂಕುಗಳನ್ನು ಬರ ಪರಿಹಾರಕ್ಕೆ ಗುರುತಿಸಲಾಗಿದ್ದು, ಅಧಿಕಾರಿಗಳು ಬಿತ್ತನೆ ಹಾಗೂ ಬೆಳೆ ಪರಿಸ್ಥಿತಿಯನ್ನು ಸ್ಥಳಕ್ಕೆ ತೆರಳಿ ನೈಜವಾಗಿ ಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ.

ರಾಗಿ ಸೇರಿದಂತೆ ವಿವಿಧ ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿಕೊಳ್ಳಲು ರೈತರಿಗೆ ಅವಕಾಶ ನೀಡಲಾಗಿದ್ದು, ಜಿಲ್ಲೆಯಲ್ಲಿ ಈಗಾಗಲೇ ಸುಮಾರು 1.50 ಲಕ್ಷ ರೈತರು ಬೆಳೆ ವಿಮೆ ಮಾಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು. ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಶಿಡ್ಲಘಟ್ಟ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಳಸಿಕೊಂಡು ಅಗತ್ಯವಿರುವ ಪ್ರದೇಶಗಳಿಗೆ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ಮಳೆ ಬರುವವರೆಗೆ ಸಾರ್ವಜನಿಕರಿಗೆ ಯಾವುದೇ ರೀತಿಯ ಅನಾನುಕೂಲ ಉಂಟಾಗದಂತೆ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಭರವಸೆ ನೀಡಿದರು.

ಕೆರೆಗಳಲ್ಲಿ ಅಕ್ರಮವಾಗಿ ಬೋರ್‌ವೆಲ್ ಕೊರೆದು ನೀರನ್ನು ತೋಟಗಳಿಗೆ ಬಳಸುತ್ತಿರುವ ಬಗ್ಗೆ ಮಾಹಿತಿ ಇದ್ದರೆ ಸಾರ್ವಜನಿಕರು ಅಧಿಕಾರಿಗಳಿಗೆ ತಿಳಿಸಬೇಕು. ಅಂತಹ ಪ್ರಕರಣಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಅದೇ ರೀತಿ, ಶಿಡ್ಲಘಟ್ಟ ತಾಲೂಕು ವ್ಯಾಪ್ತಿಯ ಕೆರೆಗಳಲ್ಲಿ ಅಕ್ರಮವಾಗಿ ಮಣ್ಣು ತೆಗೆಯುತ್ತಿರುವ ಪ್ರಕರಣಗಳ ಬಗ್ಗೆಯೂ ಮಾಹಿತಿ ಬಂದಿದ್ದು, ಸಾರ್ವಜನಿಕರಿಂದ ದೂರು ಬಂದಲ್ಲಿ ಸ್ಥಳ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದರ ಜತೆಗೆ ದಂಡ ವಿಧಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹೇಮಾವತಿ ಆರ್., ತಹಶೀಲ್ದಾರ್ ಗಗನ್ ಸಿಂಧು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪಿಡಿಒಗಳು ಹಾಗೂ ಸರ್ವೇಯರ್‌ಗಳು ಉಪಸ್ಥಿತರಿದ್ದರು.

**ಅಕ್ರಮ ಬೋರ್‌ವೆಲ್,ಮಣ್ಣು ತೆಗೆಯುವವರಿಗೆ ಎಚ್ಚರಿಕೆ**

**ಕೆರೆಗಳಲ್ಲಿ ಅಕ್ರಮವಾಗಿ ಬೋರ್‌ವೆಲ್ ಕೊರೆದು ತೋಟಗಳಿಗೆ ನೀರು ಹರಿಸುವುದು ಹಾಗೂ ಕೆರೆಗಳಿಂದ ಅನುಮತಿ ಇಲ್ಲದೆ ಮಣ್ಣು ತೆಗೆಯುವುದು ಕಂಡುಬಂದರೆ ಯಾವುದೇ ಮುಲಾಜಿಲ್ಲದೆ ಕಾನೂನು ಕ್ರಮ ಕೈಗೊಳ್ಳುವುದರ ಜತೆಗೆ ದಂಡ ವಿಧಿಸಲಾಗುವುದು. ಕೆರೆಗಳ ನೀರು ಮತ್ತು ಮಣ್ಣನ್ನು ಅಕ್ರಮವಾಗಿ ಬಳಸಿಕೊಳ್ಳುವವರು ಎಚ್ಚರಿಕೆಯಿಂದ ಇರಬೇಕು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದರು.**

---

### ಏಕಲವ್ಯ ಮಾದರಿ ವಸತಿ ಶಾಲೆಗೆ ಜಿಲ್ಲಾಧಿಕಾರಿ ಭೇಟಿ: ಶೈಕ್ಷಣಿಕ ಹಾಗೂ ಮೂಲಸೌಕರ್ಯಗಳ ಪರಿಶೀಲನೆ

ಅ.ಶ. ಸುದ್ದಿ ಅರಕೇರಾ

**ಅರಕೇರಾ: ಜಿಲ್ಲಾಧಿಕಾರಿಗಳಾದ ಶ್ರೀಮತಿ ಪೂವಿತಾ ಎಸ್. ಅವರು ಅರಕೇರಾ ತಾಲ್ಲೂಕಿನ ಕೊಟ್ಟದೊಡ್ಡಿ ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆ (EMRS)ಗೆ ಭೇಟಿ ನೀಡಿ, ಶಾಲೆಯ ಶೈಕ್ಷಣಿಕ ಚಟುವಟಿಕೆಗಳು, ಮೂಲಸೌಕರ್ಯ, ವಸತಿ ಸೌಲಭ್ಯಗಳು ಹಾಗೂ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಕಲ್ಪಿಸಲಾಗಿರುವ ವ್ಯವಸ್ಥೆಗಳನ್ನು ಪರಿಶೀಲಿಸಿದರು.**



ಭೇಟಿಯ ಸಂದರ್ಭದಲ್ಲಿ ಬಾಲಕರ ಹಾಗೂ ಬಾಲಕಿಯರ ವಸತಿ ನಿಲಯಗಳ ವ್ಯವಸ್ಥೆ, ಮೆಸ್ ಮತ್ತು ಅಡುಗೆಮನೆಯ ನಿರ್ವಹಣೆ, ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರದ ಗುಣಮಟ್ಟ ಹಾಗೂ ಪ್ರಮಾಣವನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿದರು. ಜೊತೆಗೆ ಕುಡಿಯುವ ನೀರು, ನೈರ್ಮಲ್ಯ, ಸ್ವಚ್ಛತೆ, ವಿದ್ಯುತ್ ವ್ಯವಸ್ಥೆ, ಶಾಲಾ ಆವರಣದ ಸುರಕ್ಷತೆ ಹಾಗೂ ವಿವಿಧ ಮೂಲಸೌಕರ್ಯಗಳ ನಿರ್ವಹಣೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ನಂತರ ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳು ಹಾಗೂ ಶಾಲಾ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಅಗತ್ಯತೆಗಳು, ಅಭಿಪ್ರಾಯಗಳು ಹಾಗೂ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲಕರ ವಾತಾವರಣ ನಿರ್ಮಿಸುವುದು ಹಾಗೂ ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಏಕಲವ್ಯ ಮಾದರಿ ವಸತಿ ಶಾಲೆಗಳು ಪರಿಶಿಷ್ಟ ಪಂಗಡದ (ST) ವಿದ್ಯಾರ್ಥಿಗಳಿಗೆ 6ರಿಂದ 12ನೇ ತರಗತಿಯವರೆಗೆ ಉಚಿತ ಹಾಗೂ ಗುಣಮಟ್ಟದ ವಸತಿ ಶಿಕ್ಷಣ ಒದಗಿಸುವ ಮಹತ್ವದ ಉದ್ದೇಶವನ್ನು ಹೊಂದಿವೆ. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸುರಕ್ಷಿತ, ಸ್ವಚ್ಛ ಹಾಗೂ ಉತ್ತಮ ವಸತಿ ವಾತಾವರಣ ಕಲ್ಪಿಸುವುದು ಜಿಲ್ಲಾಡಳಿತದ ಪ್ರಮುಖ ಆದ್ಯತೆಯಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಸುರಕ್ಷತೆ, ಆರೋಗ್ಯ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಿರುವ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಒದಗಿಸಲು ಜಿಲ್ಲಾಡಳಿತದಿಂದ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ತಿಳಿಸಿದರು. ವಿದ್ಯಾರ್ಥಿಗಳ ಹಿತಾಸಕ್ತಿ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿದ್ದಲ್ಲಿ ಅವುಗಳನ್ನು ಗಮನಕ್ಕೆ ತಂದು, ಅಗತ್ಯ ಕ್ರಮ ಕೈಗೊಳ್ಳಲು ಸಹಕರಿಸುವಂತೆ ಅವರು ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಸಲಹೆ ನೀಡಿದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

---

## ಸಾರ್ವಜನಿಕ ಸ್ಥಳದಲ್ಲಿದ್ದ ಕಸಾಯಿಖಾನೆ ಅಡ್ಡೆ ಮೇಲೆ ದಾಳಿ





ಅ.ಶ. ಸುದ್ದಿ ವಿಜಯಪುರ

**ವಿಜಯಪುರ (ದೇವನಹಳ್ಳಿ): ಪಟ್ಟಣದ ರಹಮತ್ ನಗರದ ಸಾರ್ವಜನಿಕ ಸ್ಥಳ ಹಾಗೂ ವಸತಿ ಪ್ರದೇಶದಲ್ಲಿ ಅಕ್ರಮವಾಗಿ ತಲೆ ಎತ್ತಿರುವ ಕಸಾಯಿಖಾನೆ ಅಂಗಡಿಯ ಮೇಲೆ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ಪೊಲೀಸರೊಂದಿಗೆ ದಾಳಿ ನಡೆಸಿದರು.**

ಸಾರ್ವಜನಿಕ ಸ್ಥಳ ಹಾಗೂ ವಸತಿ ಪ್ರದೇಶದಲ್ಲಿ ರಾಜಾರೋಷವಾಗಿ ಅಕ್ರಮವಾಗಿ ಕಸಾಯಿಖಾನೆ ಅಂಗಡಿ ತೆರೆದಿರುವ ಬಗ್ಗೆ ಸ್ಥಳೀಯರೊಬ್ಬರು ಕಸಾಯಿಖಾನೆಯ ಚಿತ್ರ ಹಾಗೂ ವಿಡಿಯೊ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಈ ವಿಚಾರ ತಿಳಿದ ಕೂಡಲೇ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ಅಕ್ರಮ ಕಸಾಯಿಖಾನೆ ಬಂದ್ ಮಾಡಿಸಿ, ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಪೊಲೀಸರು ಆಗಮಿಸುವಷ್ಟರಲ್ಲಿ ಕಸಾಯಿಖಾನೆ ಅಂಗಡಿಯ ಮಾಲೀಕರು ಬಾಗಿಲು ಮುಚ್ಚಿ ಪರಾರಿಯಾಗಿದ್ದಾರೆ. ಅಂಗಡಿಯೊಳಗೆ ಸುಮಾರು 300 ಕೆ.ಜಿ ತೂಕದ ಗೋಮಾಂಸ ಪತ್ತೆಯಾಗಿದ್ದು, ಪೊಲೀಸರು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ತನಿಖೆ ಕೈಗೊಂಡಿದ್ದಾರೆ. ವಿಜಯಪುರದಲ್ಲಿ ಎಲ್ಲೆಂದರಲ್ಲಿ ಅಕ್ರಮವಾಗಿ ಕಸಾಯಿಖಾನೆ ತಲೆ ಎತ್ತಿದ್ದು, ನಿತ್ಯ ನೂರಾರು ಜಾನುವಾರಗಳ ಹತ್ಯೆ ನಡೆಯುತ್ತಿರುವುದು ಬೇಸರದ ಸಂಗತಿ ಎಂದು ಬಜರಂಗದಳ ಕೋಲಾರ ವಿಭಾಗದ ಸಂಯೋಜಕ ಕೃಷ್ಣಮೂರ್ತಿ ತಿಳಿಸಿದರು.

ವಿಜಯಪುರ ಪಟ್ಟಣದಲ್ಲಿ ಕಸಾಯಿಖಾನೆಗೆ ಅವಕಾಶ ಕೂಡಬಾರದು, ಜಿಲ್ಲಾ ಪ್ರಾಣಿದಯ ಸಂಘ, ಸ್ಥಳೀಯ ಸಂಸ್ಥೆಗಳು, ಪೊಲೀಸ್ ಇಲಾಖೆ ಅಕ್ರಮವಾಗಿ ತಲೆ ಎತ್ತಿರುವ ಕಸಾಯಿಖಾನೆಗಳನ್ನು ಪತ್ತೆ ಹಚ್ಚಿ ತೆರವು ಮಾಡಬೇಕು ಎಂದು ಆಗ್ರಹಿಸಿದರು.

---

## ಯುವಶಕ್ತಿಯಿಂದ ದೇಶ ಕಟ್ಟುವ ಸಂಕಲ್ಪ ಅಗತ್ಯ: ಡಾ. ಸಿ.ಕೆ. ಮೌಲಾ ಶರೀಫ್



ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: ದೇಶದ ಭವಿಷ್ಯ ಯುವಪೀಳಿಗೆಯ ಕೈಯಲ್ಲಿದ್ದು, ಜಾತಿ, ಮತ ಹಾಗೂ ಧರ್ಮದ ಭೇದಗಳನ್ನು ಬದಿಗೊತ್ತಿ ಒಗ್ಗಟ್ಟಿನಿಂದ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಸುಪ್ರೀಂ ಕೋರ್ಟ್ ವಕೀಲ ಹಾಗೂ ಸಮಾಜ ಸೇವಕ ಡಾ. ಸಿ.ಕೆ. ಮೌಲಾ ಶರೀಫ್ ಹೇಳಿದರು.**

ನಗರದ ಇಲಾಹಿ ನಗರದಲ್ಲಿ ಎಚ್.ಕೆ.ಜಿ.ಎನ್ ಸಮಿತಿ ವತಿಯಿಂದ ಆಯೋಜಿಸಿದ್ದ ಹಜರತ್ ಖ್ವಾಜಾ ಗರೀಬ್ ನವಾಜ್ ಅವರ ಛಟ್ಟಿ ಶರೀಫ್ ಹಾಗೂ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗದಿಂದ ದೊರೆತ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು. ಕೆಲ ಸ್ವಾರ್ಥ ರಾಜಕಾರಣಿಗಳು ತಮ್ಮ ರಾಜಕೀಯ ಲಾಭಕ್ಕಾಗಿ ಯುವಶಕ್ತಿಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಇದರ ಪರಿಣಾಮವಾಗಿ ಸಮಾಜ ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಯುವಕರು ವಿದ್ಯಾವಂತರಾಗಿ ಸಮಾಜಮುಖಿ ಚಿಂತನೆಯೊಂದಿಗೆ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಸ್ವಾತಂತ್ರ್ಯ ದೊರೆತು 80 ವರ್ಷಗಳಾದರೂ ಬಡತನ, ಆರ್ಥಿಕ ಅಸಮಾನತೆ ಹಾಗೂ ಸಾಮಾಜಿಕ ಸಮಸ್ಯೆಗಳು ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಯುವಕರು ಬದಲಾವಣೆಯ ಸಂಕಲ್ಪ ಮಾಡಬೇಕು. ಸಂವಿಧಾನದ ಆಶಯದಂತೆ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ದೊರೆಯುವಂತಹ ಸಮಾಜ ನಿರ್ಮಾಣವಾಗಬೇಕು ಎಂದು ಹೇಳಿದರು. ಕ್ಷೇತ್ರದ ಅಭಿವೃದ್ಧಿಗೆ ಬದ್ಧ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಲ್ಲಿ ದುಡಿಯುವ ಪ್ರತಿಯೊಂದು ಕೈಗೂ ಉದ್ಯೋಗ ದೊರೆಯಬೇಕು.

ಯುವಕರು ಸ್ವಾವಲಂಬಿಗಳಾಗಿ ಬದುಕುವ ಅವಕಾಶ ಸಿಗಬೇಕು. ಯಾವುದೇ ಸಮುದಾಯವನ್ನು ಮತಬ್ಯಾಂಕ್ ಆಗಿ ಬಳಸದೆ, ಅರ್ಹತೆ ಮತ್ತು ಅನುಭವಕ್ಕೆ ತಕ್ಕಂತೆ ಎಲ್ಲರಿಗೂ ಅವಕಾಶ ಕಲ್ಪಿಸಬೇಕು. ಯುವ ಸಮುದಾಯದ ಸಹಕಾರ ದೊರೆತರೆ ಕ್ಷೇತ್ರದಲ್ಲಿ ಬದಲಾವಣೆ ತರಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಇದು ಕೇವಲ ಘೋಷಣೆಯಲ್ಲ, ನನ್ನ ಪ್ರತಿಜ್ಞೆ ಎಂದು ಡಾ. ಮೌಲಾ ಶರೀಫ್ ಹೇಳಿದರು.

---

## ದೇಶ ಹಾಗೂ ಧರ್ಮದ ರಕ್ಷಣೆಯ ಸಂಕಲ್ಪವಿರಲಿ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ (ದೇವನಹಳ್ಳಿ): ಯುವಕರು ಕೇವಲ ಉದ್ಯೋಗದ ಹಿಂದೆ ಬೀಳದೆ ದೇಶಭಕ್ತಿ, ಸಾಮಾಜಿಕ ಜವಾಬ್ದಾರಿ ಮತ್ತು ದೇಶ ಹಾಗೂ ಧರ್ಮದ ರಕ್ಷಣೆಯ ಸಂಕಲ್ಪದೊಂದಿಗೆ ಮುನ್ನಡೆಯಬೇಕು ಎಂದು ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ತಿಳಿಸಿದರು.**




ಇಲ್ಲಿನ ಗಾಂಧಿ ಚೌಕದಲ್ಲಿ ಅಖಂಡ ಭಾರತ ಸಂಕಲ್ಪ ದಿನದ ಪ್ರಯುಕ್ತ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬೃಹತ್ ಪಂಜಿನ ಮೆರವಣಿಗೆಯ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದೇಶದ ಏಕತೆ, ಅಖಂಡತೆ ಮತ್ತು ರಾಷ್ಟ್ರೀಯತೆಯ ಮಹತ್ವದ ಕುರಿತು ಮಾತನಾಡಿದ ಅವರು, ಭಾರತವು ಕೇವಲ ಭೂಪ್ರದೇಶವಲ್ಲ, ಅದು ಒಂದು ಸಂಸ್ಕೃತಿ, ಒಂದು ಭಾವನೆ. ಅಖಂಡ ಭಾರತವು ನಮ್ಮ ಪೂರ್ವಜರ ಕನಸು, ಅದನ್ನು ನನಸಾಗಿಸುವ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದೆ ಎಂದರು.

ಅಕ್ಕನ ಬಳಗದ ಅಧ್ಯಕ್ಷ ಅನಿಲ್ ಕುಮಾರ್ ಮಾತನಾಡಿ, ದೇಶದ ಸಮಗ್ರತೆ ಕಾಪಾಡುವಲ್ಲಿ ಪ್ರತಿಯೊಬ್ಬ ನಾಗರಿಕನ ಪಾತ್ರದ ಮಹತ್ತರವಾದದ್ದು. ನಮ್ಮ ಸಂಸ್ಕೃತಿಯನ್ನು ಪಾಲಿಸುವ ಜೊತೆಗೆ ಹಿರಿಯರಿಗೆ ಗೌರವ, ಒಟ್ಟಾಗಿ ಬಾಳುವ ಸಂಪ್ರದಾಯವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಕೋಲಾರ ಜಿಲ್ಲಾ ಬಜರಂಗದಳದ ಮುಖಂಡ ಗೌರಿಶಂಕರ್ ಅವರು ಅಖಂಡ ಭಾರತ ಸಂಕಲ್ಪ ದಿನದ ಹಿನ್ನೆಲೆ ಮತ್ತು ಉದ್ದೇಶ, ವಿಭಜನೆಯ ನೋವು ಮತ್ತು ಅಖಂಡ ಭಾರತದ ಅನಿವಾರ್ಯತೆಯ ಕುರಿತು ಅವರು ವಿವರಿಸಿದರು.




ನೆರೆದಿದ್ದ ಎಲ್ಲರೂ ದೇಶದ ಏಕತೆ ಮತ್ತು ಅಖಂಡ ಭಾರತದ ಸಂಕಲ್ಪವನ್ನು ಮತ್ತಷ್ಟು ಬಲಪಡಿಸುವ ಪ್ರತಿಜ್ಞೆಯನ್ನು ಕೈಗೊಂಡರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗಂಗಾದೇವಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಂಜಿನ ಮೆರವಣಿಗೆ ನಡೆಸಿದರು. ವಿಶ್ವ ಹಿಂದೂ ಪರಿಷತ್, ಬಜರಂಗದಳದ ಜಿಲ್ಲಾ ಮತ್ತು ತಾಲೂಕು ಮಟ್ಟದ ಮುಖಂಡರು, ಪದಾಧಿಕಾರಿಗಳು ಭಾಗವಹಿಸಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka